# ಹಂಪಿ ಟೈಮ್ಸ್
HAMPI TIMES

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

ಕನ್ನಡ ದಿನಪತ್ರಿಕೆ
KANNADA DAILY



Scan For Digital Colourful
Hampi Times E-paper



www.hampitimes.com
epaper.hampitimes.com
CALL US : 9448633038
Email us Your Advertisement Content to : hampitimes@gmail.com



ಸಂಪುಟ:01 • ಸಂಚಿಕೆ:249 • ನೋಂದಣಿ ನಂ.:KARKAN27911 • ವಿಜಯನಗರ • 28.02.2024 • ಬುಧವಾರ • ಪುಟ:04 • ಬೆಲೆ:2
Volume:01 • Issue:249 • Reg.No:KARKAN27911 • VIJAYANAGARA • 28.02.2024 • Wednesday • Page:04 • Rs:2


## ನಿತ್ಯ ಪಂಚಾಂಗ

ಮಾಸ: ಮಾಘ । ಸಂವತ್ಸರ: ಶೋಭಾಕೃತ

28-02-2024 – ಬುಧವಾರ

| | |
|---|---|
| ತಿಥಿ | : ಚತುರ್ಥಿ |
| ಪಕ್ಷ | : ಕೃಷ್ಣ |
| ನಕ್ಷತ್ರ | : ಹಸ್ತ-ಚಿತ್ತ |
| ಯೋಗ | : ಗಂಡ |
| ಕರಣ | : ಭವ |
| ಸೂರ್ಯೋದಯ | : 06.51.14 |
| ಸೂರ್ಯಾಸ್ತ | : 18:28:08 |
| ರಾಹು | : 12:40–14:07 |
| ಯಮಘಂಡ | : 08:18–09:45 |
| ಗುಳಿಕ | : 11:13–12:40 |

## ತುಂಗಭದ್ರಾ ನೀರಿನ ಮಟ್ಟ



ಮಂಗಳವಾರ: 27-02-2024

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1587.02 ಅಡಿ |
| ಒಳ ಹರಿವು | 00 ಕ್ಯುಸೆಕ್ |
| ಹೊರ ಹರಿವು | 934 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 8.716 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |

ಕಳೆದ ವರ್ಷ ಇದೇ ದಿನ

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1605.87 ಅಡಿ |
| ಒಳ ಹರಿವು | 00 ಕ್ಯುಸೆಕ್ |
| ಹೊರ ಹರಿವು | 8090 ಕ್ಯುಸೆಕ್ |
| ಸಾಮರ್ಥ್ಯ | 30.122 ಟಿಎಂಸಿ |

# ನಿಸ್ವಾರ್ಥದ ಸೇವೆ ಚಿರಕಾಲ

### ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ ಹೇಳಿಕೆ । ಐಸಿಯು ಅಂಬುಲೆನ್ಸ್ ಲೋಕಾರ್ಪಣೆ । ಆರೋಗ್ಯ ಶಿಕ್ಷಣ ಬಲಪಡಿಸಲು ಕೈಜೋಡಿಸಿ ಟೈಂಪಾಸ್ ಕ್ಲಬ್‌ಗಳಿಗಿಂತ ಹೊಸಪೇಟೆ ರೋಟರಿ ಕ್ಲಬ್ ಸಮಾಜಮುಖಿ ಸೇವೆ ಇತರರಿಗೆ ಮಾದರಿ । ಸೇವಾ ಮನೋಭಾವ ಹೆಚ್ಚಲಿ

**ಹಂಪಿ ಟೈಮ್ಸ್ ಹೊಸಪೇಟೆ**

ಹೊಸಪೇಟೆ ರೋಟರಿ ಕ್ಲಬ್ ಶಿಕ್ಷಣ ಮತ್ತು ಆರೋಗ್ಯಕ್ಕೆ ಹೆಚ್ಚಿನ ಆದ್ಯತೆ ನೀಡಿ, ಸಮಾಜಮುಖಿ ಕಾರ್ಯಗಳಲ್ಲಿ ತೊಡಗಿಸಿಕೊಂಡಿರುವುದು ಶ್ಲಾಘನೀಯ. ಸಮಾಜದ ಪ್ರತಿಯೊಬ್ಬರಿಗೂ ಕೈಗೆಟುಕುವ ಶುಲ್ಕದಲ್ಲಿ ಗುಣಾತ್ಮಕ ಶಿಕ್ಷಣ ಮತ್ತು ಪರಿಪೂರ್ಣ ಆರೋಗ್ಯ ಸೇವೆ ದೊರೆಯುವಂತಾಗಬೇಕು. ಆರೋಗ್ಯಯುತ ಸಮಾಜ ನಿರ್ಮಾಣಕ್ಕೆ ಖಾಸಗಿಯವರು ಸರ್ಕಾರದ ಜೊತೆ ಕೈಜೋಡಿಸಿದರೆ ಅಗತ್ಯ ಸಹಕಾರ ನೀಡಲಾಗುವುದು ಎಂದು ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ ಹೇಳಿದರು.

ನಗರದ ರೋಟರಿ ಕ್ಲಬ್‌ವತಿಯಿಂದ ಮಂಗಳವಾರ ಹಮ್ಮಿಕೊಂಡಿದ್ದ ಅಗತ್ಯ ಸೌಲಭ್ಯ ಸಹಿತ ಜಿಲ್ಲೆಯ ಮೊದಲ ಐಸಿಯು ಅಂಬುಲೆನ್ಸ್ ಲೋಕಾರ್ಪಣೆ ಸಂದರ್ಭದಲ್ಲಿ ಮುಖ್ಯ ಅತಿಥಿಯಾಗಿ ಮಾತನಾಡಿದರು. ಕ್ಲಬ್‌ಗಳು ಎಂದಾಕ್ಷಣ ಆರ್ಥಿಕ ಸಬಲರಿರುವ ಕೇಂದ್ರಗಳೆಂದೆ ಜನಸಾಮಾನ್ಯರು ಭಾವಿಸುತ್ತಾರೆ. ಜೀವನದುದ್ದಕ್ಕೂ ದಣಿದು ಇಳಿವಯಸ್ಸಿನಲ್ಲಿ ವಿಶ್ರಾಂತಿ ಮತ್ತು ಹರಟೆಗಾಗಿ ಇರುವ ಕೇಂದ್ರಗಳೆಂದು ಭಾವಿಸುವುದು ಸಹಜ. ಆದರೆ ಟೈಂಪಾಸಿಗಾಗಿ ಇರುವ




ಕ್ಲಬ್‌ಗಳಿಗಿಂತ ಹೊಸಪೇಟೆ ರೋಟರಿ ಕ್ಲಬ್ ಶಿಕ್ಷಣ ಮತ್ತು ಆರೋಗ್ಯಕ್ಕಾಗಿ ಶ್ರಮಿಸುವ ಮೂಲಕ ಇತರರಿಗೆ ಮಾದರಿಯಾಗಿದೆ. ಕಡಿಮೆ ಶುಲ್ಕದಲ್ಲಿ ಗುಣಾತ್ಮಕ ಶಿಕ್ಷಣ ಮತ್ತು ಆರೋಗ್ಯ ಸೇವೆಗಳನ್ನು ನೀಡುತ್ತಿರುವುದು ಹೆಮ್ಮೆಯ ಸಂಗತಿ. ಹಣ, ಆಸ್ತಿ ಗಳಿಸಬಹುದು. ಆದರೆ ಸಕಾಲಕ್ಕೆ ಚಿಕಿತ್ಸೆ ದೊರಕಿಸಿಕೊಡದಿದ್ದರೆ ಪ್ರಾಣಕ್ಕೆ ಹಾನಿಯಾಗುವುದುಂಟು. ಪ್ರಾಣ ಉಳಿಸುವ ನಿಸ್ವಾರ್ಥದ ಕಾರ್ಯಕ್ಕೆ ರೋಟರಿ ಸದಸ್ಯರು ಮುಂದಾಗಿದ್ದಾರೆ. ನಿಸ್ವಾರ್ಥದ ಸೇವೆಯಿಂದ ಒಬ್ಬರ ಜೀವ ಉಳಿದರೆ ಅದುವೇ ಸಾರ್ಥಕ ಸೇವೆ ಎಂದೆನಿಸಲಿದ್ದು, ಅದರ ನೆನಹು ಚಿರಕಾಲವಾಗಿರಲಿದೆ ಎಂದರು. ಜಿಲ್ಲಾ ವೈದ್ಯಾಧಿಕಾರಿ ಶಂಕರನಾಯ್ಕ ಮಾತನಾಡಿ, ನಗರದಲ್ಲಿ ರೋಟರಿ ಸಂಸ್ಥೆ ಆರಂಭವಾದಿಗಿನಿಂದಲೂ ಹಂತ ಹಂತವಾಗಿ ವಿವಿಧ ಸೇವಾ ಕ್ಷೇತ್ರಕ್ಕೆ ತನ್ನನ್ನು ವಿಸ್ತರಿಸಿಕೊಂಡಿದೆ. ಹೃದಯ ಸಂಬಂಧಿ ರೋಗಿಗಳಿಗೆ ಅತ್ಯವಶ್ಯಕವಾಗಿ ಬೇಕಾಗಿರುವ ಐಸಿಯು ಅಂಬುಲೆನ್ಸ್ ಜಿಲ್ಲಾ ಕೇಂದ್ರದಲ್ಲಿ ಜನರಿಗೆ ಒದಗಿಸುತ್ತಿರುವುದು ಸಂತಸ ತಂದಿದೆ. ಈಗಾಗಲೇ ಕಣ್ಣಿನ ಶಸ್ತ್ರ ಚಿಕಿತ್ಸೆ, ಫಿಜಿಯೋಥೆರಫಿ, ಡಯಾಲಿಸಸ್ ಸೇರಿದಂತೆ ಹೊರರೋಗಿಗಳಿಗೂ ಕಡಿಮೆ ದರದಲ್ಲಿ ಆರೋಗ್ಯ ಸೇವೆಗಳನ್ನು ನೀಡುತ್ತಾ ಬಂದಿದೆ. ಜಿಲ್ಲಾ ಕೇಂದ್ರಕ್ಕೆ ಐಸಿಯು ಅಂಬುಲೆನ್ಸ್‌ಗಳ ಸಂಖ್ಯೆಯೂ ಹೆಚ್ಚಳವಾಗಬೇಕಿದೆ ಎಂದರು.

ರೋಟರಿ ಜಿಲ್ಲಾ ಗವರ್ನರ್ ಮನಿಕ್ ಪವಾರ ಮಾತನಾಡಿದರು. ವಿ.ರಾಮಿರೆಡ್ಡಿ ರೋಟರಿ ಐಸಿಯು ಅಂಬುಲೆನ್ಸ್ ಸಹಅಧ್ಯಕ್ಷ ಸೈಯದ್ ನಾಜೀಮ್ ಪ್ರಾಸ್ತಾವಿಕ ಮಾತನಾಡಿದರು. ಐಸಿಯು ಅಂಬುಲೆನ್ಸ್ ದಾನಿ ತಿರುಪತಿನಾಯ್ಡು ಮತ್ತು ಕುಟುಂಬವನ್ನು ಇದೇ ಸಂದರ್ಭದಲ್ಲಿ ಸನ್ಮಾನಿಸಲಾಯಿತು. ರೋಟರಿ ಕ್ಲಬ್ ಅಧ್ಯಕ್ಷ ಆರ್.ಸತ್ಯನಾರಾಯಣ ಸ್ವಾಗತಿಸಿದರು. ರೋಟರಿ ಕ್ಲಬ್, ಇನ್ನರ್ ವ್ಹೀಲ್ ಕ್ಲಬ್, ಪರ್ಲ್ಸ್ ಕ್ಲಬ್‌ನ ಸದಸ್ಯರು ಸೇರಿದಂತೆ ಇತರರು ಇದ್ದರು. ರೋಟೇರಿಯನ್ ಅಶ್ವಿನ್ ಕೋತಂಬ್ರಿ ನಿರ್ವಹಿಸಿದರು.

## ಬಡ್ಡಿ ಮನ್ನಾ ಸೌಲಭ್ಯಕ್ಕಾಗಿ ಫೆ.29 ರೊಳಗೆ ಸಾಲ ಪಾವತಿಸಿ

**ಹಂಪಿ ಟೈಮ್ಸ್ ಕೊಟ್ಟೂರು**

ಕೊಟ್ಟೂರು ಪಿ ಎಲ್ ಡಿ ಬ್ಯಾಂಕಿನಲ್ಲಿ ಸಾಲ ಪಡೆದು ಸುಸ್ಥಿದಾರರಾಗಿರುವ ರೈತರು ಸಾಲ ಪಾವತಿಸಿ, ಬಡ್ಡಿ ಮನ್ನಾ ಸೌಲಭ್ಯ ಪಡೆಯಲು ಫೆ- 29 ಕೊನೆದಿನವಾಗಿದ್ದು, ರೈತರು ಪ್ರಯೋಜನ ಪಡೆಯಬೇಕು ಎಂದು ಬ್ಯಾಂಕಿನ ಆಡಳಿತ ಮಂಡಳಿಯ ನಿರ್ದೇಶಕರ ಮತ್ತು ವ್ಯವಸ್ಥಾಪಕರ ತಿಳಿಸಿದ್ದಾರೆ.

ಸಹಕಾರ ಬ್ಯಾಂಕಿಗಳಲ್ಲಿ ರೈತರು, ಸಾಲ ಪಾವತಿಸಿ, ಬಡ್ಡಿ ಮನ್ನಾ ಎಂಬ ರಾಜ್ಯ ಸರ್ಕಾರದ ಮಹತ್ವದ ಆದೇಶದನ್ವಯ ಈ ಸೌಲಭ್ಯವನ್ನು ಕಲ್ಪಿಸಲಾಗಿದೆ. ಸದರಿ ಬ್ಯಾಂಕಿನಲ್ಲಿ 138 ರೈತರು, ಸುಸ್ಥಿದಾರ ಸದಸ್ಯರಿದ್ದು, 1,38,40,000 ಕೋಟಿ. ರೂ. ಸುಸ್ಥಿದಾರ ಸಾಲವಿದ್ದು, ಇದರಲ್ಲಿ 48 ಸದಸ್ಯರು ಸಾಲ ಪಾವತಿಸಿ, ಸರ್ಕಾರದ ಬಡ್ಡಿ ಮನ್ನಾ ಸೌಲಭ್ಯವನ್ನು ಪ್ರಸ್ತುತ ಪಡೆದಿದ್ದಾರೆ ಅದೇ ರೀತಿ ಉಳಿದ ರೈತ ಬಡ್ಡಿ ಮನ್ನಾ ಸೌಲಭ್ಯ ಪಡೆದುಕೊಂಡು. ಬರದ ಕರಿನೆರಳಿನಿಂದ ಕೃಷಿಯಲ್ಲಿನ ಆರ್ಥಿಕ ನಷ್ಟವನ್ನು ಕಂಡಿರುವ ತಾವು ಈ ಸೌಲಭ್ಯದಿಂದ ತುಸು ಆರ್ಥಿಕ ನಷ್ಟವನ್ನು ಕಡಿತ ಮಾಡಿಕೊಂಡು, ಮುಂದಿನ ಕೃಷಿ ಚಟುವಟಿಕೆಗಳಲ್ಲಿ ಆರ್ಥಿಕ ಚೇತರಿಕೆ ಕಂಡುಕೊಳ್ಳುವಂತೆ ತಿಳಿಸಿದ್ದಾರೆ.

# ಬೇಡಿಕೆಗಿಂತ ಕರ್ತವ್ಯಕ್ಕೆ ಆದ್ಯತೆ ಇರಲಿ ನಮಗು ನಿಮಗೂ ಜನರೆ ಮಾಲೀಕರು

### ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿಕೆ । ರಾಜ್ಯದ ಜನರ ಪರವಾಗಿ ಕೆಲಸ ಮಾಡಬೇಕು 7ನೇ ವೇತನ ಆಯೋಗದ ವರದಿ ಬಂದ ನಂತರ ಸಕಾರಾತ್ಮಕ ತೀರ್ಮಾನ । ನೌಕರರಿಗೆ ಅಭಯ




**ಹಂಪಿ ಟೈಮ್ಸ್ ಬೆಂಗಳೂರು**

ಪಂಚಗ್ಯಾರಂಟಿಗಳನ್ನು ಜಾರಿ ಮಾಡುವ ಆರ್ಥಿಕ ಹೊರೆಯ ನಡುವೆಯೂ 7ನೇ ವೇತನ ಆಯೋಗದ ಅಂತಿಮ ವರದಿ ಬಂದ ನಂತರ ಸರ್ಕಾರಿ ನೌಕರರ ಬಗ್ಗೆ ಸರ್ಕಾರ ಸಕಾರಾತ್ಮಕವಾಗಿ ತೀರ್ಮಾನವನ್ನು ಕೈಗೊಳ್ಳಲಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ರಾಜ್ಯ ಮಟ್ಟದ ಸರ್ಕಾರಿ ನೌಕರರ ಸಮ್ಮೇಳನವನ್ನು ಮಂಗಳವಾರ ಉದ್ಘಾಟಿಸಿ ಮಾತನಾಡಿದರು. ಕೇಂದ್ರ ಸರ್ಕಾರ ನಿರ್ಧರಿಸಿದಂತೆ ತುಟ್ಟಿಭತ್ಯೆಯನ್ನು ಯಾವುದೇ ವಿಳಂಬವಿಲ್ಲದೇ ರಾಜ್ಯದಲ್ಲಿ ನೀಡಲಾಗುತ್ತಿದೆ. ಎನ್ ಪಿ ಎಸ್ ತೆಗೆದು ಹಳೆ ಪಿಂಚಣಿ ವ್ಯವಸ್ಥೆಯನ್ನು ಜಾರಿ ಮಾಡುವ ಬಗ್ಗೆಯೂ ಚರ್ಚಿಸಿ ಸೂಕ್ತ ತೀರ್ಮಾನ ಕೈಗೊಳ್ಳಲಾಗುವುದು. ಸರ್ಕಾರಿ ನೌಕರರಿಗೆ ಕರ್ನಾಟಕ ಆರೋಗ್ಯ ಸಂಜೀವಿನಿ ಯೋಜನೆಯನ್ನು ಜಾರಿ ಮಾಡುವ ಬಗ್ಗೆಯೂ ಶೀಘ್ರದಲ್ಲಿ ತೀರ್ಮಾನಿಸಲಾಗುವುದು ಎಂದ ಮುಖ್ಯಮಂತ್ರಿಗಳು ಸರ್ಕಾರ ಮತ್ತು ಜನರ ನಡುವೆ ಸೇತುವೆಯಾಗಿ ಕಾರ್ಯನಿರ್ವಹಿಸುವ ಜವಾಬ್ದಾರಿಯುತ ಕೆಲಸವನ್ನು ಪರಿಣಾಮಕಾರಿಯಾಗಿ ಮಾಡುತ್ತಿರುವ ಸರ್ಕಾರಿ ನೌಕರರ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು.

**ರಾಜ್ಯದ ಅಭಿವೃದ್ಧಿಯಲ್ಲಿ ಬಾಗಿಯಾಗಬೇಕು**

ಕರ್ನಾಟಕದಲ್ಲಿ 7.50 ಲಕ್ಷ ಸರ್ಕಾರಿ ನೌಕರರಿದ್ದಾರೆ. ಅದರಲ್ಲಿ 5.90 ಲಕ್ಷ ಜನ ಹಾಲಿ ಕೆಲಸ ಮಾಡುತ್ತಿದ್ದಾರೆ. 2.50 ಲಕ್ಷ ಜನರನ್ನು ಭರ್ತಿ ಮಾಡಲು ಸಾಧ್ಯವಾಗಿಲ್ಲ. ಕರ್ನಾಟಕದ ಜನಸಂಖ್ಯೆ 7 ಕೋಟಿ ಇದೆ. 7.50 ಲಕ್ಷ ಮಂಜೂರಾಗಿರುವ ಹುದ್ದೆಗಳಿವೆ. 7 ಲಕ್ಷ ಜನ 7 ಕೋಟಿ ಜನರ ಕಷ್ಟ ಸುಖಗಳಲ್ಲಿ ಭಾಗಿಯಾಗುವ, ರಾಜ್ಯದ ಅಭಿವೃದ್ಧಿಯಲ್ಲಿ ಬಾಗಿಯಾಗುವ ಪ್ರಾಮಾಣಿಕ ಪ್ರಯತ್ನವನ್ನು ಮಾಡಬೇಕು. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಜನರು ನಮ್ಮನ್ನು 5 ವರ್ಷಕ್ಕೊಮ್ಮೆ ಆಯ್ಕೆ ಮಾಡಿದರೆ, ಸರ್ಕಾರಿ ಸೇವೆಗೆ ಸೇರಿದ ಮೇಲೆ ನಿವೃತ್ತಿಯಾಗುವವರೆಗೆ ನವೀಕರಣ ಮಾಡಿಸಿಕೊಳ್ಳುವ ಪ್ರಮೇಯವಿಲ್ಲ. ರಾಜಕಾರಣಿಗಳು 5 ವರ್ಷಕ್ಕೊಮ್ಮೆ ಕರ್ನಾಟಕದ ಜನರ ಆಶೀರ್ವಾದವನ್ನು ನವೀಕರಿಸಿಕೊಳ್ಳಬೇಕು ಎಂದರು. >>4

# ಮಕ್ಕಳಿಗೆ ಉನ್ನತ ಶಿಕ್ಷಣ ಸಂಸ್ಕಾರ ಕೊಟ್ಟು ಬೆಳೆಸಿ

### ಸವಿತಾ ಪೀಠದ ಶ್ರೀ ಸವಿತಾನಂದನಾಥ ಸ್ವಾಮೀಜಿ ಹೇಳಿಕೆ




**ಹಂಪಿ ಟೈಮ್ಸ್ ಹೊಸಪೇಟೆ**

ಅಭಿವೃದ್ಧಿಯಿಂದ ವಂಚಿತವಾಗಿರುವ ಸವಿತಾ ಸಮಾಜದ ಜನರು ಆರ್ಥಿಕ, ಸಾಮಾಜಿಕ, ರಾಜಕೀಯವಾಗಿ ಮುಂದೆ ಬರಬೇಕು. ಮಕ್ಕಳಿಗೆ ಉನ್ನತ ಶಿಕ್ಷಣದ ಜತೆಗೆ ಸುಸಂಸ್ಕೃತರನ್ನಾಗಿ ಬೆಳೆಸಬೇಕು ಎಂದು ಕೊಂಚೂರು ಸವಿತಾ ಮಹಾ ಸಂಸ್ಥಾನ ಪೀಠದ ಶ್ರೀ ಸವಿತಾನಂದನಾಥ ಸ್ವಾಮೀಜಿ ಹೇಳಿದರು.

ನಗರದ ಸವಿತಾ ಸಮಾಜದಿಂದ ಇಲ್ಲಿನ ಶ್ರೀ ವೆಂಕಟೇಶ್ವರ ಕಲ್ಯಾಣ ಮಂಟಪದಲ್ಲಿ ಮಂಗಳವಾರ ಏರ್ಪಡಿಸಿದ್ದ ಶ್ರೀ ಸವಿತಾ ಮಹರ್ಷಿ ಜಯಂತೋತ್ಸವ ಉದ್ಘಾಟಿಸಿ ಮಾತನಾಡಿದರು. ಕ್ಷೌರಿಕ ವೃತ್ತಿಯನ್ನು ಜೀವನೋಪಾಯಕ್ಕಾಗಿ ಅವಲಂಬಿಸಿರುವ ಸವಿತಾ ಸಮಾಜಕ್ಕೆ ಭವ್ಯ ಇತಿಹಾಸಿವಿದೆ. 12ನೇ ಶತಮಾನದಲ್ಲಿ ಅಣ್ಣ ಬಸವಣ್ಣ ಸೃಷ್ಟಿಸಿದ್ದ ಕಲ್ಯಾಣ ಕ್ರಾಂತಿಯಲ್ಲಿ ಹಡಪದ ಅಪ್ಪಣ್ಣ ಅವರ ಕೊಡುಗೆ ಅಪಾರ. ಅಂದು ಮಹಾಸಂಸ್ಥಾನದ ಮಹಾರಾಜರಾಗಿದ್ದ ಬಿಜ್ಜಳ ಮಹಾರಾಜ, ಅಶೋಕ ಚಕ್ರವರ್ತಿ ಅವರೂ ಸವಿತಾ ಸಮಾಜದವರೇ. ಆದರೆ, ಕಾಲಾಂತರದಲ್ಲಿ ಸವಿತಾ ಸಮಾಜದ ಜನರು ಶೋಷಣೆಗೆ ಒಳಪಟ್ಟಿದ್ದು, ಇಂದಿಗೂ ನಮ್ಮ ಜೀವನ ದುಸ್ಥಿತಿಯಲ್ಲಿದೆ. ಅದಕ್ಕೆ ಶಿಕ್ಷಣವೊಂದೇ ಪರಿಹಾರವಾಗಿದೆ. ಅದಕ್ಕಾಗಿ ತಮ್ಮ ಮಕ್ಕಳನ್ನು ವಿದ್ಯಾವಂತರನ್ನಾಗಿಸಬೇಕು ಎಂದು ಸಲಹೆ ನೀಡಿದರು.

ಸಾನ್ನಿಧ್ಯ ವಹಿಸಿ ಬಳ್ಳಾರಿಯ ಕಲ್ಯಾಣ ಸ್ವಾಮೀಜಿ ಮಾತನಾಡಿ, ಸಮಾಜದಲ್ಲಿ ಶಾಂತಿ ಪ್ರಿಯರೆಂದೇ ಹೆಸರುವಾಸಿಯಾಗಿರುವ ಕ್ಷೌರಿಕರು, ಸೌಹಾರ್ದ, ಸಾಮರಸ್ಯದ ಜೀವನಕ್ಕೆ ಇತರರಿಗೆ ಮಾದರಿಯಾಗಿದ್ದಾರೆ ಎಂದು ಹೇಳಿದರು. >>4

# ಜ್ಞಾನಕ್ಕಿಂತ ದೊಡ್ಡ ಸಂಪತ್ತು ಬೇರೊಂದಿಲ್ಲ

### ಜ್ಞಾನಭಾರತಿ ಸಮೂಹ ಶಿಕ್ಷಣ ಸಂಸ್ಥೆಗಳ ಅಧ್ಯಕ್ಷ ಡಾ.ಕೆ.ಎಂ.ರವಿಕುಮಾರ್ ಹೇಳಿಕೆ । ವಚನ ಸಾಹಿತ್ಯ ದತ್ತಿ ಉಪನ್ಯಾಸ

**ಹಂಪಿ ಟೈಮ್ಸ್ ಕೂಡ್ಲಿಗಿ**

ಹಾಡಿದರೆ ಪದ್ಯವಾಗುವ, ಓದಿದರೇ ಗದ್ಯವಾಗುವ ಶ್ರೇಷ್ಠ ಸಾಹಿತ್ಯ, ವಚನ ಸಾಹಿತ್ಯ ಎಂದು ಶ್ರೀಮತಿ ಅಂಗಡಿ ವೀರಮ್ಮ, ತಿರುಕಪ್ಪ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಸಹ ಪ್ರಾಧ್ಯಾಪಕಿ ಡಾ.ಟಿ. ಗಾಯಿತ್ರಮ್ಮ ಬಣ್ಣಿಸಿದರು.

ಪಟ್ಟಣದ ಜ್ಞಾನಭಾರತಿ ವಿದ್ಯಾಲಯದಲ್ಲಿ ಮಂಗಳವಾರ ಕನ್ನಡ ಸಾಹಿತ್ಯ ಪರಿಷತ್ತು ತಾಲೂಕು ಘಟಕದ ವತಿಯಿಂದ ಏರ್ಪಡಿಸಿದ್ದ ದತ್ತಿ ಉಪನ್ಯಾಸ ಕಾರ್ಯಕ್ರಮದಲ್ಲಿ ವಚನ ಸಾಹಿತ್ಯದ ಕುರಿತು ದತ್ತಿ ಉಪನ್ಯಾಸ ನೀಡಿ ಮಾತನಾಡಿದರು. ಸರಳವಾಗಿ ಓದುವ ಮೂಲಕ ಎಂಥಾವರಿಗೂ ಅರ್ಥವಾಗುವಂತೆ ಅಂದಿನ ವಚನಕಾರರು ತಮ್ಮ ಸಂವಾದವನ್ನೆ ವಚನವಾಗಿ ಬರೆದಿದ್ದಾರೆ. ತಮ್ಮ ವಚನಗಳಲ್ಲಿ ಸಮಾಜವನ್ನು ತಿದ್ದುವ




ಮೂಲಕ ಅಸಮಾನತೆ, ಮೌಢ್ಯ, ಲಿಂಗ ಸಮಾನತೆ ಕುರಿತು ಸಾಹಿತ್ಯ ರಚನೆ ಮಾಡುವ ಮೂಲಕ ಸಾಹಿತ್ಯಕ್ಕೆ ದೊಡ್ಡ ಕೊಡುಗೆ ನೀಡಿದ್ದಾರೆ ಎಂದು ತಿಳಿಸಿದರು. ಜಾತಿ ವ್ಯವಸ್ಥೆಯನ್ನು ಕಟುವಾಗಿ ಟೀಕಿಸಿದ ಶರಣರು ತಾವುಗಳು ನುಡಿದಂತೆ ನಡೆದರು, ಕಾಯಕ ತತ್ವಕ್ಕೆ ಅತ್ಯಂತ ಹೆಚ್ಚಿನ ಮಹತ್ವ ನೀಡಿದ್ದರು. 12 ನೇ ಶತಮಾನದಲ್ಲಿ ಸುಮಾರು 115 ವಚನಕಾರರಲ್ಲಿ 35 ಕುಲ ಕಸುಬು ಆಧಾರಿತ ವಚನಕಾರರು ಇದ್ದು, ತಮ್ಮ ವೃತ್ತಿಯಲ್ಲಿ ತೊಡಗಿ ಅದರಲ್ಲಿ ದೇವರನ್ನ ಕಂಡವರು ಎಂದು ತಿಳಿಸಿದರು.

ಜ್ಞಾನಭಾರತಿ ಸಮೂಹ ಶಿಕ್ಷಣ ಸಂಸ್ಥೆಗಳ ಅಧ್ಯಕ್ಷ ಡಾ.ಕೆ. ಎಂ.ರವಿಕುಮಾರ್ ಮಾತನಾಡಿ, ಶರಣ ಸಾಹಿತ್ಯ ಹಾಗೂ ಜಾನಪದ ಸಾಹಿತ್ಯದ ತವರು ಉತ್ತರ ಕರ್ನಾಟಕ ಎಂದು ತಿಳಿಸಿದರು. 12 ನೇ ಶತಮಾನದಲ್ಲಿ ನೂರಾರು ವಚನಕಾರರು ತಮ್ಮ ವಚನ ಚಳುವಳಿಯಲ್ಲಿ ಸಮಾಜದಲ್ಲಿನ ಅಸಮಾನತೆ, ಸ್ತ್ರೀ ಸ್ವಾತಂತ್ರ್ಯ ಹಾಗೂ ಸಾಮಾಜಿಕ ಪಿಡುಗುಗಳ ಬಗ್ಗೆ ಮಾರ್ಮಿಕವಾಗಿ ತಿಳಿಸಿದರು. ಇಂದಿನ ಅಂಬೇಡ್ಕರ್ ಅವರ ಸಂವಿಧಾನದ ಪರಿಕಲ್ಪನೆ ಹುಟ್ಟಿದ್ದೆ ಬಸವಣ್ಣನವರ ಅನುಭವ ಮಂಟಪದಿಂದ ಎಂದು ತಿಳಿಸಿದರು. ವಚನಗಳಲ್ಲಿ ಜೀವನ ಮೌಲ್ಯ ಅಡಗಿದೆ ಮತ್ತು ಅದರಿಂದ ತಿಳಿಯುವುದು ಸಾಕಷ್ಟಿದೆ ಎಂದ ಅವರು, ಮನುಷ್ಯನಿಗೆ ಜ್ಞಾನಕ್ಕಿಂತ ದೊಡ್ಡ ಸಂಪತ್ತು ಇನ್ನೊಂದಿಲ್ಲ ಎಂದು ತೋರಿಸಿಕೊಟ್ಟ ವಚನ ಸಾಹಿತ್ಯದಿಂದ ಸಮಾಜ ಕಲಿಯುವುದು ಸಾಕಷ್ಟಿದೆ ಎಂದರು.

ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಉಪಾಧ್ಯಕ್ಷ ಎಚ್.ಜಿ.ಹನುಮಂತಪ್ಪ, ವಚನಸಾಹಿತ್ಯದ ಕುರಿತು ಜೋಯಿಸ್ ಮಧುಸೂಧನ ಆಚಾರ್ ಮಾತನಾಡಿದರು. ವಾಲ್ಮೀಕಿ ಸಮಾಜದ ತಾಲೂಕು ಅಧ್ಯಕ್ಷ ಸುರೇಶ್, ಕನ್ನಡ ಸಾಹಿತ್ಯ ಪರಿಷತ್ತು ತಾಲೂಕು ಅಧ್ಯಕ್ಷ ವೀರೇಶ್ ಅಂಗಡಿ, ಕಜಾಪ ತಾಲೂಕು ಅಧ್ಯಕ್ಷ ಕೆ.ಎಂ.ವೀರೇಶ್ ಸೇರಿದಂತೆ ಉಪನ್ಯಾಸಕರು, ವಿಧ್ಯಾರ್ಥಿಗಳು ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದರು.

# ತೋಂಟದಾರ್ಯ ಸ್ವಾಮಿ ರಥೋತ್ಸವಕ್ಕೆ ತಯಾರಿ



**ಹಂಪಿ ಟೈಮ್ಸ್, ಹಗರಿಬೊಮ್ಮನಹಳ್ಳಿ**

ತಾಲೂಕಿನ ತಂಬ್ರಹಳ್ಳಿಯಲ್ಲಿ ಮಹಾಶಿವರಾತ್ರಿ ದಿನದಂದು ಜರುಗಲಿರುವ ಶ್ರೀತೋಂಟದಾರ್ಯ ಸ್ವಾಮಿಯ ರಥೋತ್ಸವ ಹಿನ್ನೆಲೆಯಲ್ಲಿ, ಗ್ರಾಮದ ಮುಖಂಡರು ತೇರಿನ ಗಾಲಿಗಳನ್ನು ಹೊರ ಹಾಕುವ ಮೂಲಕ ಧಾರ್ಮಿಕ ಕಾರ್ಯಕ್ರಮಗಳಿಗೆ ಚಾಲನೆ ನೀಡಿದರು.

ಗ್ರಾಮದ ಶ್ರೀಗುರು ಕೊಟ್ಟೂರೇಶ್ವರ ದೇಗುಲದ ಆವರಣದಲ್ಲಿ ಎತ್ತಿನ ಬಂಡಿಗೆ ಪೂಜೆ ಸಲ್ಲಿಸಿ, ತೇರು ಕಟ್ಟುವ ಕಾರ್ಯಕ್ಕೆ ಚಾಲನೆ ನೀಡಿದರು. ಈ ವೇಳೆ ಗ್ರಾಮದ ಹಿರಿಯರಾದ ಎಚ್.ಬಿ.ನಾಗನಗೌಡ, ಉದಯ ಭಾಸ್ಕರ್‌ರಾವ್, ಗೌರಜ್ಜನವರ ಬಸವರಾಜಪ್ಪ, ಬಣಕಾರ ಕೊಟ್ರೇಶಪ್ಪ, ಕಡ್ಡಿ ಚನ್ನಬಸಪ್ಪ, ಬಣಕಾರ ತೋಟಪ್ಪ, ಬಿ.ಲಕ್ಷ್ಮಣ, ಎಚ್.ಬಿ.ಗಂಗಾಧರಗೌಡ, ಕಿನ್ನಾಳ್ ಸುರೇಶ್, ಟಿ.ಎಂ.ನಾಗಭೂಷಣಯ್ಯ, ಬಾಳೆಕಾಯಿ ವೀರೇಶ, ಅರ್ಚಕ ಮಹಾಬಲೇಶ್ವರಯ್ಯ ಸೇರಿದಂತೆ ಇತರರಿದ್ದರು.

## ವಚನ ಅರಿವು

### ವಾಸ್ತವವಾಗಿ ಬದುಕಬೇಕು

**ವಾರ ತಿಥಿ ಲಗ್ನಂಗಳೆಂದು ಬೇರೊಂದ ಮಾಡುವನ್ನಬರ
ತ್ರಿವಿಧ ಪೂಜೆ ಕೆಟ್ಟಿತ್ತು.
ಗುರುಲಿಂಗಜಂಗಮದ ಅನುವನರಿತುದೆ ನೇಮ.
ಕಾಲ ಉಚಿತಕ್ಕೆ ಬಂದುದ ಕೂಡಿಕೊಂಬುದೆ ನಿತ್ಯ.
ಈ ಗುಣ ಅಮರೇಶ್ವರಲಿಂಗವ ಕೂಡುವ ಕೂಟ.**

**– ಆಯ್ದಕ್ಕಿ ಮಾರಯ್ಯ**

ಮನುಷ್ಯ ಶುಭ ಅಶುಭಗಳೆಂದು ಮೂಢ ವಿಚಾರಗಳಿಗೆ ಸಿಕ್ಕು ನರಳಾಡುತ್ತಿದ್ದಾನೆ. ಆ ವಾರ ಶುಭ, ಈ ವಾರ ಅಶುಭ ತಿಥಿ, ನಕ್ಷತ್ರಗಳನ್ನು ನೋಡಿ ಕಾರ್ಯ ಚಟುವಟಿಕೆಗಳನ್ನು ಮಾಡುವುದನ್ನು ರೂಢಿ ಮಾಡಿಕೊಂಡಿದ್ದಾನೆ. ಮಾನವನಿಗೆ ವಾರ, ತಿಥಿ, ನಕ್ಷತ್ರಗಳ ಹಂಗು ಬೇಕಿಲ್ಲ ಅದೊಂದು ಮೂಢ ಆಚರಣೆಯಾಗಿದೆ. ಯಾವ ವಾರವು ಕೆಟ್ಟದ್ದಲ್ಲ, ಯಾವ ವಾರವು ಒಳ್ಳೆಯದಲ್ಲ; ಯಾವ ತಿಥಿ ದಿನ, ನಕ್ಷತ್ರಗಳು ಕೆಟ್ಟವಲ್ಲ, ಒಳ್ಳೆಯವಲ್ಲ ಯಾವ ಲಗ್ನ ಸಮಯವು ಕೆಟ್ಟದ್ದಲ್ಲ, ನಾವು ಮಾಡುವ ಕ್ರಿಯೆಯ ಮೇಲೆ ಎಲ್ಲವು ನಿಂತಿರುತ್ತದೆ. ಹೀಗೆ ಇಂತಹ ಮೌಢ್ಯವನ್ನು ನಂಬಿದವರಿಗೆ ಲಿಂಗ ಪೂಜೆಯ ಫಲವೆ ಇಲ್ಲ. ಶರಣರು ತಿಳಿಸಿದ ಗುರುವಿನ ಉಪದೇಶ ಪಡೆದು, ಲಿಂಗವನ್ನು ಧರಿಸಿ ಸಮಾಜಕ್ಕೆ ತತ್ವ ಬೋಧನೆಯನ್ನು ಮಾಡುವ ಜಂಗಮರ ಬೋಧನೆಯನ್ನು ತಿಳಿದು ಶರಣತತ್ವದ ಆಚಾರವನ್ನು ಅಳವಡಿಸಿಕೊಂಡು ಬದುಕುವುದೆ ನೇಮವಾಗಿದೆ. ಮನುಷ್ಯನ ಜೀವನದಲ್ಲಿ ಕಾಲ ಹೇಗೆ ನಿರ್ಣಯ ಮಾಡುತ್ತದೆಯೋ ಹಾಗೆ ಸ್ವಾಭಾವಿಕವಾಗಿ, ವಾಸ್ತವವಾಗಿ ಬದುಕಬೇಕು. ಈ ವೈಚಾರಿಕ ಗುಣವನ್ನು ಅಳವಡಿಸಿಕೊಂಡು ಬದುಕಿದರೆ ಅದೇ ಜ್ಞಾನದ, ಜೀವನದ ಬೆಳಕನ್ನು ಪಡೆಯುವ ಬಗೆಯಾಗಿದೆ.

(ಡಾ. ನಂದೀಶ್ವರ ದಂಡೆ ಅವರ ವಚನ ಜೀವನ ಮಾರ್ಗ ಪುಸ್ತಕದಿಂದ)

## ಯುವನಿಧಿ ಯೋಜನೆ: ಸ್ವಯಂ ಘೋಷಣೆ ಪ್ರಮಾಣ ಪತ್ರ ಸಲ್ಲಿಸಲು ಸೂಚನೆ

**ಹಂಪಿ ಟೈಮ್ಸ್ ಕೊಪ್ಪಳ**

ಯುವನಿಧಿ ಯೋಜನೆಯಡಿಯಲ್ಲಿ ನೋಂದಣಿಯಾದ ಅಭ್ಯರ್ಥಿಗಳು ಫೆಬ್ರವರಿ 29 ರೊಳಗಾಗಿ ಸ್ವಯಂ ಘೋಷಣೆ ಪ್ರಮಾಣ ಪತ್ರವನ್ನು ಸಲ್ಲಿಸುವಂತೆ ಕೊಪ್ಪಳ ಜಿಲ್ಲಾ ಕೌಶಲ್ಯಾಭಿವೃದ್ಧಿ ಅಧಿಕಾರಿಗಳಾದ ಪ್ರಾಣೇಶ ಅವರು ತಿಳಿಸಿದ್ದಾರೆ.

ರಾಜ್ಯದ ಮಹತ್ವಾಕಾಂಕ್ಷಿ ಯೋಜನೆಯಾದ ಯುವನಿಧಿ ಯೋಜನೆಯಲ್ಲಿ ಪದವಿ, ಸ್ನಾತಕೋತ್ತರ ಪದವಿ ಮತ್ತು ಡಿಪ್ಲೊಮಾಗಳನ್ನು 2022–23ನೇ ಶೈಕ್ಷಣಿಕ ವರ್ಷದಲ್ಲಿ ವ್ಯಾಸಂಗ ಮಾಡಿ 2023ರಲ್ಲಿ ತೇರ್ಗಡೆಯಾಗಿ ಅರ್ಹತೆ ಹೊಂದಿದ ಅಭ್ಯರ್ಥಿಗಳು ಈಗಾಗಲೇ ಸೇವಾ ಸಿಂಧು ಪೋರ್ಟಲ್‌ನಲ್ಲಿ ನೋಂದಣಿಯಾಗಿದ್ದು, ಫಲಿತಾಂಶದ ನಂತರ ನಿರುದ್ಯೋಗಿಗಳಾಗಿ 180 ದಿವಸಗಳು ಪೂರೈಸಿದ ಅಭ್ಯರ್ಥಿಗಳಿಗೆ 2024ರ ಜನವರಿ ತಿಂಗಳಲ್ಲಿ ನೇರ ನಗದು ವರ್ಗಾವಣೆ ಮಾಡಲಾಗಿರುತ್ತದೆ. ಅಭ್ಯರ್ಥಿಗಳು ಪ್ರತಿ ತಿಂಗಳು ಈ ಪ್ರಯೋಜನ ಪಡೆಯಬೇಕಿದ್ದರೆ, ಪ್ರತಿ ತಿಂಗಳಲ್ಲಿ ತಾನು ನಿರುದ್ಯೋಗಿಯೆಂದು, ವ್ಯಾಸಂಗ ಮುಂದುವರೆಸುತ್ತಿಲ್ಲವೆಂದು ಹಾಗೂ ಸ್ವಯಂ ಉದ್ಯೋಗಿಯಲ್ಲವೆಂದು ಸ್ವಯಂ ಘೋಷಣೆ ಮಾಡಬೇಕಾಗಿರುತ್ತದೆ. ಪ್ರಸಕ್ತ ಫೆಬ್ರವರಿ 29 ರವರೆಗೆ ಸೇವಾ ಸಿಂಧು ಪೋರ್ಟಲ್‌ನಲ್ಲಿ ಸ್ವಯಂ ಘೋಷಣೆ ಪ್ರಮಾಣ ಪತ್ರ ಸಲ್ಲಿಸಲು ಅವಕಾಶ ಕಲ್ಪಿಸಲಾಗಿದೆ. ಪ್ರಯೋಜನ ಪಡೆಯುತ್ತಿರುವ ಅಭ್ಯರ್ಥಿಗಳು ಪ್ರತಿ ತಿಂಗಳು ಸ್ವಯಂ ಘೋಷಣೆ ಮಾಡದಿದ್ದಲ್ಲಿ ಅಂತಹ ಅಭ್ಯರ್ಥಿಗಳಿಗೆ ನೇರ ನಗದು ವರ್ಗಾವಣೆ ಮಾಡಲಾಗುವುದಿಲ್ಲ. ಈಗಾಗಲೇ ನೋಂದಾಯಿಸಿಕೊಂಡ ಅಭ್ಯರ್ಥಿಗಳಿಗೆ ಜನವರಿಯಲ್ಲಿ ನೇರ ನಗದು ವರ್ಗಾವಣೆ ಮಾಡಲಾಗಿದ್ದು, ಮುಂದಿನ ತಿಂಗಳು ಪ್ರಯೋಜನ ಪಡೆದುಕೊಳ್ಳಲು ಸ್ವಯಂ ಘೋಷಣೆ ಮಾಡಬೇಕಾಗಿರುವ ಕುರಿತು ಎಸ್.ಎಂ.ಎಸ್ ಸಂದೇಶ ಅಭ್ಯರ್ಥಿಗಳಿಗೆ ರವಾನಿಸಲಾಗಿರುತ್ತದೆ. ಅಭ್ಯರ್ಥಿಗಳು ಕಡ್ಡಾಯವಾಗಿ ಆಧಾರ್ ಸೀಡೆಡ್ ಬ್ಯಾಂಕ್ ಖಾತೆಯನ್ನು ಹೊಂದಿರಬೇಕು. ಅಭ್ಯರ್ಥಿಗಳು ಸ್ವಯಂ ಘೋಷಣೆ ಮಾಡಿಕೊಳ್ಳಲು ವೆಬ್‌ಸೈಟ್ https://sevasindhugs.karnataka.gov.in ನ್ನು ವೀಕ್ಷಿಸಬಹುದು. ಹೆಚ್ಚಿನ ವಿವರಗಳಿಗೆ ಸಹಾಯವಾಣಿ ಸಂಖ್ಯೆ 080–25189112ಗೆ ಸಂಪರ್ಕಿಸಬಹುದು ಎಂದು ಕೈಗಾರಿಕಾ ತರಬೇತಿ ಹಾಗೂ ಉದ್ಯೋಗ ಇಲಾಖೆ ತಿಳಿಸಿದೆ ಎಂದು ಪ್ರಕಟಣೆ ತಿಳಿಸಿದೆ.

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

ಸಂಪಾದಕರು: ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.
ಇ–ಮೇಲ್:hampitimes@gmail.com
M: 9448633038

ವಿದ್ಯಾರ್ಥಿಗಳು ಅಂಕಗಳನ್ನು ತೆಗೆಯುವ ಯಂತ್ರಗಳಾಗಿ, ಈ ಜಗತ್ತನ್ನೇ ಗೆಲ್ಲುವ ಸ್ಪರ್ಧಿಗಳಾಗಿ, ಐದಂಕಿಯ ಸಂಬಳದಾರರಾಗಿ ಮಾತ್ರ ಅವರನ್ನು ಐಶಾರಾಮಿ ಜೀವನಕ್ಕೆ ಅಣಿಗೊಳಿಸುವುದರ ಹಿಂದೆ ಪಾಲಕರ ಒತ್ತಡ, ವಿದ್ಯಾರ್ಥಿಗಳ ನಿರಾಸಕ್ತಿ, ಶಿಕ್ಷಣ ಸಂಸ್ಥೆಗಳ ಲಾಭಕೋರತನ ಹಾಗೂ ಶಿಕ್ಷಕರ ಬೋಧನಾಸಕ್ತಿಯ ಕೊರತೆ ಇದೆ ಎಂದೆನಿಸದೇ ಇರದು. ಕಲ್ಯಾಣ ಕರ್ನಾಟಕದಲ್ಲಿ ಸಾಮಾನ್ಯವಾಗಿ ಎರಡೇ ಕಾಲಗಳು ಅನುಭವಕ್ಕೆ ಬರುತ್ತವೆ; ಒಂದು ಬೇಸಿಗೆಕಾಲ, ಇನ್ನೊಂದು ಕಡುಬೇಸಿಗೆ ಕಾಲ. ಹೀಗಿರುವಾಗ ಬರಗಾಲ ಇಲ್ಲಿನ ಜನಕ್ಕೆ ಹೊಸತಲ್ಲ. ಆದರೆ ಇಂಥ ಪರಿಸರದಲ್ಲಿ ಬೆಳೆಯುವ ವಿದ್ಯಾರ್ಥಿಗಳು ಕೇಳುವ ಪ್ರಶ್ನೆ ಆಶ್ಚರ್ಯ ಹುಟ್ಟಿಸುತ್ತದೆ. ಯಾವುದಕ್ಕೆ ಯಾರಿಗೆ 'ಬರ' ಬಂದಿದೆ ಎಂಬುದಂತೂ ತೀವ್ರವಾಗಿ ಕಾಡುವಂಥ ಪ್ರಶ್ನೆ. ಇಂದು ತಲೆದೋರಿದ ಈ ಬಗೆಯ 'ಬರಗಾಲ' ಭಯಾನಕವೆನಿಸುತ್ತದೆ.

# ಬರಗಾಲ ಅಂದ್ರೆ ಏನ್ ಸರ್ ?

ಮಳೆಗಾಲ ಮುಗಿದು, ಚಳಿಗಾಲ ಕಳೆದು, ಈಗತಾನೇ ಬೇಸಿಗೆಕಾಲ ಕಾಲಿಡ್ತಿದೆ. ಇಂಥದರಲ್ಲಿ ಬರಗಾಲದ ಬಗ್ಗೆ ಯಾಕೆ ಚಿಂತೆ ಅಂತೀರಾ....? ಬರಗಾಲ ಎಂದರೇನು ಸರ್...? ಈ ಪ್ರಶ್ನೆ ವಿದ್ಯಾರ್ಥಿಗಳಿಂದ ಕೇಳಿಬಂದಾಗ ನನಗೂ ನಿಮ್ಮಷ್ಟೇ ಆಶ್ಚರ್ಯವಾಯಿತು. ಅವರು ಕೇಳಿದ ಈ ಪ್ರಶ್ನೆ ಸಹಜವಾಗಿತ್ತಾದರೂ ಪ್ರಕೃತಿವಿಕೋಪವೊ, ಬೌದ್ಧಿಕ ದಾರಿದ್ರ್ಯವೊ, ಭಾವನಾತ್ಮಕ ಬರವೋ ಹೀಗೆ ಯಾವುದಕ್ಕೆ ಯಾರಿಗೆ 'ಬರ' ಎಂದು ನೂರಾರು ವಿಚಾರಗಳು ನನ್ನ ಮನಸ್ಸಿನೊಳಗೆ ಸುಳಿಯತೊಡಗಿದವು. ಜೊತೆಗೆ ಈ ಪ್ರಶ್ನೆಯ ಹಿಂದಿನ ಜಾಡು ಹಿಡಿದು ಹೊರಟಾಗ ತಲೆಯಲ್ಲಿ ಮೂಡುವ ವಿಚಾರಗಳಿಗೆ, ಆಲೋಚನೆಗಳಿಗೆ 'ಬರ'ವೇನು ? ನಾನೇ ಈ 'ಬರ(ಹ)'ದ ಬಗ್ಗೆ ಒಂದಿಷ್ಟು ಚಕಿತಗೊಂಡೆ.

'ಬರ' ಎಂದರೆ ದುರ್ಭಿಕ್ಷ, ಕ್ಷಾಮ, ಅಭಾವ, ವರ, ಅನುಗ್ರಹ ಎಂಬಿತ್ಯಾದಿ ಅರ್ಥಗಳಿವೆ. ಬಹಳ ಮುಖ್ಯವಾಗಿ ಪ್ರಾಕೃತಿಕ ಕಾಲಗಳು ಮೂರು ; ಮಳೆಗಾಲ, ಚಳಿಗಾಲ, ಬೇಸಿಗೆಕಾಲ. ಅದರಲ್ಲೂ ಮನುಷ್ಯನಿಗೆ ದೇವರುಕೊಟ್ಟ ವರ ಎರಡು ; ಒಂದು ಬಲಗಾಲು, ಇನ್ನೊಂದು ಎಡಗಾಲು. ಈ ಕಾಲಗಳ ದೃಷ್ಟಿಯಿಂದ ಬರ 'ವರ'ವೆಂದೇ ಹೇಳಬಹುದು. ಭಗವಂತನ ಅನುಗ್ರಹದಿಂದ ಮನುಷ್ಯ ಕಾಲಕ್ಕೆ ತಕ್ಕಂತೆ ಹೆಜ್ಜೆಹಾಕುತ್ತಾನೆ. ತನ್ನ ವ್ಯಕ್ತಿತ್ವ ರೂಪಿಸಿಕೊಳ್ಳುತ್ತಾನೆ. ಹೀಗಾಗಿ ಮನುಷ್ಯ ಕಾಲಾನುಸಾರಿ, ಕಾಲಾವಲಂಬಿ.


ಇತಿಹಾಸದ ವಿಷಯ ಉಪನ್ಯಾಸಕರು ತಮ್ಮ ಬೋಧನೆಯಲ್ಲಿ ಪ್ರಾಚೀನ ಕಾಲ, ಅರ್ವಾಚೀನ ಕಾಲಗಳ ಕುರಿತು ತಿಳಿಸುತ್ತಾರೆ. ಇನ್ನು ಕನ್ನಡ ಭಾಷಾ ಶಿಕ್ಷಕರು ವ್ಯಾಕರಣದ ಪಾಠ ಮಾಡುವಾಗ ಭೂತಕಾಲ, ವರ್ತಮಾನ ಕಾಲ, ಭವಿಷ್ಯತ್ಕಾಲ ಎಂದು ಮೂರು ಕಾಲಗಳ ಬಗ್ಗೆ ಹೇಳಿಕೊಡು ತ್ತಾರೆ. ಅಲ್ಲದೇ ಸಂಧಿಗಳ ಕುರಿತು ಬೋಧಿಸುವಾಗ 'ಕ' ಕಾರದ ಬದಲಿಗೆ 'ಗ' ಕಾರ ಆದೇಶವಾಗುವ ಬಗ್ಗೆ ತಿಳಿಸಿದರೂ ಅದು ತಲೆಗೆ ಹತ್ತೋದು ಬಲು ಕಷ್ಟ. ಯಾಕೆಂದರೆ ವ್ಯಾಕರಣವೇ ಕ್ಲಿಷ್ಟ..! ಇನ್ನು ಹಿರಿಯರು ಔಪಚಾರಿಕವಾಗಿ ಮಾತನಾಡುತ್ತ, ಎಂಥ 'ಕಾಲ'ಬಂತಪ್ಪಾ? ಕಾಲಕಾಲಕ್ಕೆ ಮಳೆ–ಬೆಳೆ ಆಗ್ತಿಲ್ಲ, ಇದೆಲ್ಲ 'ಕೆಡುಗಾಲ' ಅನ್ನೋದು; ನ್ಯಾಯ–ನೀತಿ, ಧರ್ಮ–ಗಿರ್ಮ ಇವಕ್ಕೆಲ್ಲ ಕಾಲ ಅಲ್ರಯ್ಯ, ಈಗೇನಿದ್ರೂ 'ಕಲಿಗಾಲ' ಕಣ್ರಯ್ಯ ಈ ತರದ ಪದಗಳು ಆವಾಗವಾಗ ಕಿವಿಗೆ ಬೀಳುತ್ತಲೇ ಇರುತ್ತವೆ. ಕಾಲ–ಗಾಲ ಅನ್ನೋ ಆದೇಶಾಕ್ಷರಗಳು ಇಂದಿನ ವಿದ್ಯಾರ್ಥಿಗಳ ಪಾಲಿಗೆ ಗೊಂದಲ ಹುಟ್ಟಿಸಿವೆ ಯೇನೋ...? ಇನ್ನು ಪದಗಳು ಅರ್ಥ ಆಗೋದು ಹೇಗೆ..? ಹೀಗೇ ಏನೇನೋ ಪ್ರಶ್ನೆಗಳು ಪ್ರವಾಹದಂತೆ ಅಪ್ಪಳಿಸಿದವು.



ಡಾ. ಸಂಗಮೇಶ ಎಸ್. ಗಣಿ
ಹೊಸಪೇಟೆ, ಮೊ:9734171324

Scan For Digital Colourful
HAMPI TIMES E-paper

ಈ ನಡುವೆ 'ಸರಿಯಾದ ಕಾಲಕ್ಕೆ ತಕ್ಕಷ್ಟು ಪ್ರಮಾಣದಲ್ಲಿ ಮಳೆಯಾಗದೇ ಜನಜೀವನದ ಮೇಲೆ ವ್ಯತಿರಿಕ್ತ ಪರಿಣಾಮ ಆಗುವುದನ್ನು ಬರಗಾಲ' ಎನ್ನಬಹುದು. ಸಾಮಾನ್ಯವಾಗಿ ಎರಡರಿಂದ ಮೂರು ಮಳೆಗಾಲ ಕಳೆದರೂ ಸಮರ್ಪಕ ಮಳೆ ಆಗದಿರುವುದನ್ನೂ




ಬರಗಾಲ ಎನ್ನಲಾಗುತ್ತದೆ. ಹೀಗಾಗಿ 'ಬರ' ಎಂದರೆ ಜೀವಸಂಕುಲದ ಮೇಲೆ ಪ್ರಕೃತಿ ಎಳೆಯುವ 'ಬರೆ'.

ಪ್ರಕೃತಿ ವಿಕೋಪಗಳಲ್ಲಿ ಬರಗಾಲವೂ ಒಂದು. ಬರ ಎಂದರೆ ಭಯವೆನಿಸುತ್ತದೆ. ಬರಗಾಲದ ಪರಿಣಾಮ ಮಾತ್ರ ಘೋರ, ಭೀಕರ. ಮಳೆಯಿಲ್ಲದೇ ಬೆಳೆಯೆಲ್ಲ ಒಣಗಿ, ಕುಡಿಯಲು ನೀರು ಸಿಗದೆ, ಜನ–ಜಾನುವಾರಗಳು ಪರಿತಾಪ ಪಡುವ, ಎಲ್ಲೆಲ್ಲೂ ನೀರಿಗಾಗಿ ಆಹಾಕಾರ ಏಳುವ ಪರಿಸ್ಥಿತಿ ಮಾತ್ರ ಅನುಭವಿಸಲಸಾಧ್ಯ. ಯಾತನೆ, ಬವಣೆಯನ್ನು ಅನುಭವಿಸುವ ಮನುಷ್ಯನಿಗೆ ಬರಗಾಲದ ಬಿಸಿ ತಟ್ಟೇತಟ್ಟುತ್ತದೆ.

ಉತ್ತರ ಕರ್ನಾಟಕ ಮತ್ತು ಕಲ್ಯಾಣ ಕರ್ನಾಟಕ ಭಾಗದ ಬಹುತೇಕ ಪ್ರದೇಶಗಳಲ್ಲಿರುವವರಿಗೆ ಬೇಸಿಗೆಕಾಲ ಇಲ್ಲವೇ ಬರಗಾಲದ ಅನುಭವ ಸರ್ವೇ ಸಾಮಾನ್ಯವಾದುದು. ಆದರೆ ವಿಚಿತ್ರ ಅಂದರೆ, ಕಲ್ಯಾಣ ಕರ್ನಾಟಕ ಭಾಗದ ಹೊಸಪೇಟೆಯ ಕೆಲ ವಿದ್ಯಾರ್ಥಿಗಳು ಬರಗಾಲ ಅಂದರೆ ಏನು ಅಂತ ಪ್ರಶ್ನೆ ಕೇಳಿದರೆ ಆಶ್ಚರ್ಯ ಆಗದೇ ಇರುತ್ತದೆಯೆ...? ಕನ್ನಡ ಭಾಷಾ ಮೇಸ್ಟ್ರಾದ ನನಗಂತೂ ಈ ಪ್ರಶ್ನೆ ಆಶ್ಚರ್ಯಕರವೂ, ಆತಂಕಕಾರಿಯೂ, ಆಘಾತಕಾರಿಯೂ ಆಗಿ ತೋರಿತು.

ಬಹುಶಃ ಈ ಪ್ರಶ್ನೆ ಈ ಭಾಗದ ಮಕ್ಕಳಿಗೆ ಮಾತ್ರ ಹೊಳೆದಿದೆಯಂತಲೂ ನನಗೆ ಅನಿಸುತ್ತಿಲ್ಲ. ಬದಲಿಗೆ, ನಮ್ಮ ನಾಡಿನ ಬೇರೆಬೇರೆ ಕಡೆಗಳಲ್ಲೂ ವಾಸಿಸುವ ಇಂಗ್ಲಿಷ್ ಮಾಧ್ಯಮದ ಅದರಲ್ಲೂ ಶ್ರೀಮಂತ ಕುಟುಂಬಗಳ ಐಶರಾಮಿ ಜೀವನ ಕಳೆಯುವ ಕೆಲ ವಿದ್ಯಾರ್ಥಿಗಳಿಗೂ ಈ ಪ್ರಶ್ನೆ ಕಾಡಿರಬಹುದು...!?

ಕಲ್ಯಾಣ ಕರ್ನಾಟಕದಲ್ಲಿ ಸಾಮಾನ್ಯವಾಗಿ ಎರಡೇ ಕಾಲಗಳು ಅನುಭವಕ್ಕೆ ಬರುತ್ತವೆ; ಒಂದು ಬೇಸಿಗೆಕಾಲ, ಇನ್ನೊಂದು ಕಡುಬೇಸಿಗೆ ಕಾಲ. ಹೀಗಿರುವಾಗ ಬರಗಾಲ ಇಲ್ಲಿನ ಜನಕ್ಕೆ ಹೊಸತಲ್ಲ. ಆದರೆ ಇಂಥ ಪರಿಸರದಲ್ಲಿ ಬೆಳೆಯುವ ವಿದ್ಯಾರ್ಥಿಗಳು ಕೇಳುವ : ಬರಗಾಲ ಎಂದರೆ ಏನು ಸರ್ ?' ಎಂಬ ಪ್ರಶ್ನೆ ಆಶ್ಚರ್ಯ ಹುಟ್ಟಿಸುತ್ತದೆ. ಇಂಥ ಪರಿಸರದ ನಡುವೆ ಬೆಳೆದರೂ ಆ ಪರಿಸರ ಇವರನ್ನು ಪ್ರಭಾವಿಸದೇ ಇರಲು ಹೇಗೆ ಸಾಧ್ಯ ? ಇಂದಿನ ವಿದ್ಯಾರ್ಥಿಗಳು ಪರಿಸರಜನ್ಯ ಅನುಭವದಿಂದ ಹೇಗೆ ವಿಮುಖರಾಗಿದ್ದಾರೆ ಎಂದು ಆತಂಕವನ್ನೂ ತಂದಿತು. ಇನ್ನೂ ಒಬ್ಬ ವಿದ್ಯಾರ್ಥಿ 'ಬರಗಾಲ ಎಂದರೆ ಮಳೆಗಾಲ. ಬರಗಾಲಕ್ಕಾಗಿ ಪ್ರತಿಯೊಂದು ಜೀವಿಯೂ, ಪ್ರತಿಯೊಬ್ಬ ಮನುಷ್ಯನೂ ಕಾಯುತ್ತಿರುತ್ತಾನೆ, ರೈತರು ಬರಗಾಲಕ್ಕಾಗಿ ಕಾಯುತ್ತಾರೆ' ಎಂದು ಬರೆದ ಉತ್ತರ ಆಘಾತಕಾರಿಯೂ ಆಗಿ ತೋರಿತು. ಹೀಗೇ ಕೇಳುವ, ಬರೆಯುವ ವಿದ್ಯಾರ್ಥಿಗಳಿಗೆ 'ಕಾಲಜ್ಞಾನ' ಇಲ್ಲ!. ಹಾಗಂತ 'ಕಾಲಾಯ ತಸ್ಮೈನಮಃ' ಎಂದು ಉದಾಸೀನವೂ ಸಲ್ಲ. ವಿದ್ಯಾರ್ಥಿಗಳು ಕೇಳಿದ ಈ ಬರಗಾಲದ ಪ್ರಶ್ನೆ ಮೇಲ್ನೋಟಕ್ಕೆ ಅಸಹಜವೆನಿಸಿದರೂ ಹೆಚ್ಚು ಗಂಭೀರವಾಗಿ ಚಿಂತನೆಗೀಡು ಮಾಡುತ್ತದೆ.

'ಪರಿಸರದಲ್ಲಿ ಇದ್ದು ಪರಿಸರ ಕಲಿಸುವ ಪಾಠಗಳಿಂದ ಹಾಗೂ ಅನುಭವಗಳ ಸಮೃದ್ಧತೆಯಿಂದ ರೂಪುಗೊಳ್ಳುವ ವ್ಯಕ್ತಿತ್ವವೇ ನಿಜವಾದ ಶಿಕ್ಷಣ' ಎಂಬ ಮಾತಿದೆ. ಆದರೆ ಇಂದಿನ ಶೈಕ್ಷಣಿಕ ವ್ಯವಸ್ಥೆ ಈ ಮಾತಿಗೆ ತೀರ ವ್ಯತಿರಿಕ್ತವಾಗಿದೆ. ವಿದ್ಯಾರ್ಥಿಗಳು ಪರಿಸರದೊಂದಿಗೆ ಸಾವಯವ ಸಂಬಂಧವನ್ನು ಕಳೆದುಕೊಳ್ಳುತ್ತಿದ್ದಾರೆ. ಮೊಬೈಲ್, ಟ್ವಿಟರ್, ಇನ್ಸಟಾಗ್ರಾಂ, ಫೇಸಬುಕ್, ಯೂಟ್ಯೂಬ್ ಮುಂತಾದ ಮಾಧ್ಯಮಗಳಲ್ಲಿ ಕಳೆದುಹೋಗುತ್ತಿದ್ದಾರೆ.

ವಿದ್ಯಾರ್ಥಿಗಳು ಅಂಕಗಳನ್ನು ತೆಗೆಯುವ ಯಂತ್ರಗಳಾಗಿ, ಈ ಜಗತ್ತನ್ನೇ ಗೆಲ್ಲುವ ಸ್ಪರ್ಧಿಗಳಾಗಿ, ಐದಂಕಿಯ ಸಂಬಳದಾರರಾಗಿ ಮಾತ್ರ ಅವರನ್ನು ಐಶಾರಾಮಿ ಜೀವನಕ್ಕೆ ಅಣಿಗೊಳಿಸುವುದರ ಹಿಂದೆ ಪಾಲಕರ ಒತ್ತಡ, ವಿದ್ಯಾರ್ಥಿಗಳ ನಿರಾಸಕ್ತಿ, ಶಿಕ್ಷಣ ಸಂಸ್ಥೆಗಳ ಲಾಭಕೋರತನ ಹಾಗೂ ಶಿಕ್ಷಕರ ಬೋಧನಾಸಕ್ತಿಯ ಕೊರತೆ ಇದೆ ಎನಿಸುತ್ತದೆ.

ಮಾನವ ಸಹಜ ಸಂವೇದನೆಗಳಿಂದ ದೂರಗೊಳಿಸುವ ಯಾವುದೇ ಬಗೆಯ ಶಿಕ್ಷಣವು ನಿರರ್ಥಕ. ಆದ್ದರಿಂದ ಇಂದಿನ ಶೈಕ್ಷಣಿಕ ವ್ಯವಸ್ಥೆ ಕುರಿತು ಗಂಭೀರವಾಗಿ ಆಲೋಚಿಸಬೇಕಾಗಿದೆ. ಅಷ್ಟೇ ಅಲ್ಲದೆ, ಬೋಧನೆ ಮತ್ತು ಕಲಿಕಾ ಪ್ರಕ್ರಿಯೆಯನ್ನು ಇನ್ನಷ್ಟು ಹೆಚ್ಚು ಅರ್ಥಪೂರ್ಣಗೊಳಿಸುವ ಕಡೆಗೆ ಎಚ್ಚೆತ್ತುಕೊಳ್ಳಬೇಕಾಗಿದೆ. ಮಕ್ಕಳನ್ನು ಪರಿಸರಸ್ನೇಹೀ ವಾತಾವರಣದಲ್ಲಿ ಬೆಳೆಸಬೇಕಿದೆ. ಪರಿಸರ ಒಡ್ಡುವ ಸವಾಲುಗಳನ್ನು ಎದುರಿಸಲು ಸಜ್ಜುಗೊಳಿಸಬೇಕಿದೆ.

ಈ ಬಾರಿ ಪಿಯು ಪ್ರಥಮ ವರ್ಷದ ಕನ್ನಡ ಭಾಷಾ ವಿಷಯದ ವಾರ್ಷಿಕ ಪ್ರಶ್ನೆಪತ್ರಿಕೆಯಲ್ಲಿ ಬರಗಾಲ ಕುರಿತು ಕೇಳಲಾದ ಪ್ರಬಂಧ ಮಾದರಿ ಪ್ರಶ್ನೆಗೆ ಉತ್ತರ ಬರೆಯುವ ಪೂರ್ವದಲ್ಲಿ ಕೇಳಿದ ಈ ಬರಗಾಲದ ಪ್ರಶ್ನೆ ನನ್ನನ್ನು ತಬ್ಬಿಬ್ಬುಗೊಳಿಸಿತಲ್ಲದೇ, ಚಿಂತೆಗೀಡೂ ಮಾಡಿತು. ಈ ಲೇಖನಕ್ಕೆ ವಸ್ತುವಾಯಿತು.ಮಗು ಕೌಟುಂಬಿಕವಾಗಿ, ಸಮಾಜಮುಖಿಯಾಗಿ, ನೆಲಮುಖಿಯಾಗಿ, ಅಧ್ಯಾತ್ಮಿಕವಾಗಿ, ಸಾಂಸ್ಕೃತಿಕವಾಗಿ ಬೆಳವಣಿಗೆ ಹೊಂದಬೇಕೆಂಬುದೇ ಶಿಕ್ಷಣದ ನಿಜವಾದ ಉದ್ದೇಶ.

ಹೀಗಿರುವಾಗ, ಮಕ್ಕಳ ಸರ್ವತೋಮುಖ ಬೆಳವಣಿಗೆಯ ಬಗ್ಗೆ ದೂರದೃಷ್ಟಿಯಿಲ್ಲದ ಪಾಲಕರ ವಿವೇಕಕ್ಕೆ ಬರವೊ, ವಿದ್ಯಾರ್ಥಿಗಳನ್ನು ಪರಿಸರಸಂಬಂಧಿಯಾಗಿ ಬೆಳೆಸದೇ ಸ್ಪರ್ಧಾರ್ಥಿಗಳನ್ನಾಗಿ ಮಾತ್ರ ರೂಪಿಸಿ, ಅವರ ಏಕಮುಖಿ ಬೆಳವಣಿಗೆಯ ಆಶಯವನ್ನಿರಿಸಿಕೊಂಡ ಶಿಕ್ಷಣ ಸಂಸ್ಥೆಗಳ ಉದ್ದೇಶಗಳಿಗೆ ಬರವೊ, ಸಮಗ್ರ ಬೆಳವಣಿಗೆಯ ಮತ್ತು ಉಜ್ವಲ ಭವಿಷ್ಯದ ಕನಸುಗಳ ಸಾಕಾರಕ್ಕೆ ಶ್ರಮಿಸಬೇಕೆಂಬ ವಿದ್ಯಾರ್ಥಿಗಳ ಆಸಕ್ತಿಗೆ ಬರವೋ, ಸರ್ವತೋಮುಖ ಬೆಳವಣಿಗೆಗೆ ಇಂಬುಕೊಡದ ಶಿಕ್ಷಣ ವ್ಯವಸ್ಥೆಯ ನಡೆಗೆ ಬರವೊ, ಬೋಧನೆಗೆ ಬರವೊ, ಕಲಿಕೆಗೆ ಬರವೊ, ಬೌದ್ಧಿಕ ಬೆಳವಣಿಗೆಗೆ ಬರವೊ ? ಸಾಂಸ್ಕೃತಿಕ ವಿಕಾಸಕ್ಕೆ ಬರವೊ...? ಒಟ್ಟಾರೆ ಯಾವುದಕ್ಕೆ ಯಾರಿಗೆ 'ಬರ' ಬಂದಿದೆ ಎಂಬುದಂತೂ ತೀವ್ರವಾಗಿ ಕಾಡುವಂಥ ಪ್ರಶ್ನೆ. ಇಂದು ತಲೆದೋರಿದ ಈ ಬಗೆಯ 'ಬರಗಾಲ' ಭಯಾನಕವೆನಿಸುತ್ತದೆ. ಈ ಕುರಿತು ಎಲ್ಲರೂ ವಿವೇಚಿಸಬೇಕು. ಬರಗಾಲದ ಭಯಾನಕತೆಯಿಂದ ಹೊರಬರುವ ದಾರಿಯನ್ನು ಹುಡುಕಿಕೊಳ್ಳಬೇಕು.

# ಪರೀಕ್ಷಾ ಯಶಸ್ಸಿಗೆ ಆಹಾರ ಕ್ರಮ

ಪರೀಕ್ಷೆಯ ಯಶಸ್ಸು ಪ್ರತಿ ಹದಿಹರೆಯದವರಿಗೆ ವಿಭಿನ್ನವಾಗಿರುತ್ತದೆ ಆದರೆ,ಪರೀಕ್ಷೆಗಳು ಸಮೀಪಿಸುತ್ತಿರುವಾಗ ಒತ್ತಡದ ಮಟ್ಟಗಳು ಹೆಚ್ಚಾಗುವುದರಲ್ಲಿ ಸಂದೇಹವಿಲ್ಲ ಮತ್ತು ಅದರೊಂದಿಗೆ ಆರೋಗ್ಯಕರ ಆಹಾರ ಸೇವನೆ ಇನ್ನಷ್ಟು ಸವಾಲಿನ ಸಾಧ್ಯತೆಯಿದೆ.

ಪರೀಕ್ಷೆಗಳು ಸಮೀಪಿಸುತ್ತಿದ್ದಂತೆ ಹಲವು ಪೋಷಕರು ತಿನ್ನುವುದನ್ನು ಕಡಿಮೆ ಮಾಡು,ಓದಿನ ಕಡೆ ಆಸಕ್ತಿ ತೋರಿಸು ಎಂಬ ಉದ್ಗಾರವನ್ನು ಎಲ್ಲಾ ಮಕ್ಕಳಿಗೂ ಹೇಳುವುದು ಸರ್ವೇಸಾಮಾನ್ಯ.

ಕೆಲ ವಿದ್ಯಾರ್ಥಿಗಳಂತೂ ಊಟ ಉಪಹಾರದ ಕಡೆ ಗಮನವನ್ನು ಕೊಡದೆ ಎಲ್ಲಾ ಸಮಯದಲ್ಲೂ ಓದು,ಬರಹದ ಕಡೆ ಗಮನಹರಿಸಿ ಸರಿಯಾದ ಸಮತೋಲಿತ ಆಹಾರ ಸೇವನೆ ಮಾಡದೆ ನಿಶ್ಯಕ್ತಿ ಉಂಟಾಗಿ ಪರೀಕ್ಷಾ ಕೊಠಡಿಯಲ್ಲಿ ತೊಂದರೆಗೆ ಒಳಗಾದ ಉದಾಹರಣೆಗಳುಂಟು.

ಪರೀಕ್ಷೆ ಬರೆದು ಅಂಕ ಪಡೆಯುವುದು ಹೇಗೆ ಮುಖ್ಯವೋ ಅದಕ್ಕೆ ಪೂರಕವಾಗಿ ಆರೋಗ್ಯವನ್ನು ಕಾಪಾಡಿಕೊಳ್ಳುವುದು ಅಷ್ಟೇ ಮುಖ್ಯ.

ಸರಿಯಾದ ಕ್ರಮದಲ್ಲಿ ಆಹಾರ ಸೇವನೆ ಮಾಡದೆ ಹೋದರೆ ಪರೀಕ್ಷಾ ಕೊಠಡಿಗೆ ಹೋಗುವ ಬದಲು ಆಸ್ಪತ್ರೆ ಕೊಠಡಿಗೆ ಹೋಗುವ ಅನಿವಾರ್ಯತೆ ಉಂಟಾಗಬಹುದು.

ಪರೀಕ್ಷೆಗಳ ಸಮಯದಲ್ಲಿ ಅತ್ಯುತ್ತಮ ಸಾಧನೆ ಮಾಡಲು ನಿಮಗೆ ಸಹಾಯ ಮಾಡಲು ನೀವು ಏನನ್ನು ಸೇವಿಸಬೇಕು ಮತ್ತು ಏನನ್ನು ಸೇವಿಸಬಾರದು ಎಂಬುದನ್ನು ತಿಳಿದುಕೊಳ್ಳಬೇಕು.

### ಕ್ರಮಬದ್ಧ ಊಟ ಸೇವನೆ

ನಿಧಾನಗತಿಯ ಕಾರ್ಬೋಹೈಡ್ರೇಟ್‌ಗಳೊಂದಿಗಿನ ಊಟವು ನಿಮ್ಮ ಅಭ್ಯಾಸದ ಜೊತೆಗಿನ ಗಮನವನ್ನು ಉತ್ತೇಜಿಸಲು ಸಹಾಯ ಮಾಡುತ್ತದೆ.
ಬೆಳಗಿನ ಉಪಹಾರ,ಮಧ್ಯಾಹ್ನದ ಊಟ ಹಾಗೂ ರಾತ್ರಿಯ ಊಟವನ್ನು ಯಾವುದೇ ಕಾರಣಕ್ಕೂ ಬಿಡಕೂಡದು. ಪರೀಕ್ಷಾ ಸಂದರ್ಭದಲ್ಲಿನ ಉಪವಾಸವು ಪ್ರಯೋಜನಕ್ಕೆ ಬಾರದು ಇದರಿಂದ ಆರೋಗ್ಯ ಹದಗೆಡುವುದು ನೆನಪಿರಲಿ.

### ನಿರ್ಜಲೀಕರಣ

ಸಾಕಷ್ಟು ನೀರು ಅಥವಾ ದ್ರವರೂಪದ ಹಣ್ಣಿನ ರಸಗಳನ್ನು ಸೇವಿಸಿ. ಕ್ರಮಬದ್ಧವಾದ ನೀರಿನ ಸೇವನೆ ನಿಮ್ಮ ಮೆದುಳು ಚುರುಕಾಗಿರಲು ಸಹಕಾರಿಯಾಗುತ್ತದೆ ಹಾಗೂ ದೇಹಕ್ಕೆ ಉಷ್ಣತೆಯಿಂದ ತೊಂದರೆ ಉಂಟಾಗುವುದನ್ನು ತಡೆಯುತ್ತದೆ.

### ಇವುಗಳನ್ನು ಸೇವಿಸಿ

ಪರೀಕ್ಷಾ ಸಂದರ್ಭದಲ್ಲಿ ಸಾಕಷ್ಟು ಋತುಮಾನಕ್ಕೆ ಹೊಂದಿಕೆಯಾಗುವ ಹಣ್ಣು,ಹಂಪಲುಗಳು ಮತ್ತು ಹಸಿರು ತರಕಾರಿಗಳನ್ನು ಸೇವಿಸುವುದು ಒಳಿತು ಇದರಿಂದ ಸರಿಯಾದ ಜೀರ್ಣಕ್ರಿಯೆಯೊಂದಿಗೆ ಸಾಕಷ್ಟು ಶಕ್ತಿ ದೇಹಕ್ಕೆ ಲಭ್ಯವಾಗುತ್ತದೆ.
ಓದಿನ ಬಿಡುವಿನ ವೇಳೆಯಲ್ಲಿ ಹಸಿಯಾಗಿ ಸೇವಿಸಬಹುದಾದ ತರಕಾರಿಗಳು ಹಾಗೂ ತಾಜಾ ಹಣ್ಣುಗಳನ್ನು ಸೇವಿಸಬಹುದು





ಡಾ.ಸುಧಾಕರ ಜಿ.ಲಕ್ಕವಳ್ಳಿ
ಲೇಖಕರು 8747969381

ಕರಿದ ಎಣ್ಣೆಯ ಪದಾರ್ಥಗಳ ಬದಲಿಗೆ ಇವು ಉತ್ತಮ.

### ಗಮನವಿರಲಿ

ಕೆಫೀನ್ ಉತ್ತೇಜಕವಾಗಿ ಕಾರ್ಯನಿರ್ವಹಿಸುತ್ತದೆ ಮತ್ತು ಸಣ್ಣ ಪ್ರಮಾಣದ ಸೇವನೆ ಏಕಾಗ್ರತೆಗೆ ಸಹಾಯ ಮಾಡುತ್ತದೆ ಆದರೆ ಕೆಫೀನ್ ಅತಿಯಾಗಿ ಸೇವನೆ ದೇಹವನ್ನು ನಿರ್ಜಲೀಕರಣಗೊಳಿಸುತ್ತದೆ ಹಾಗೂ ನಿದ್ರಾಹೀನತೆ ಉಂಟುಮಾಡುತ್ತದೆ.
ನಿದ್ರಾ ಹೀನತೆ ಹಲವಾರು ತೊಂದರೆಗಳಿಗೆ ಕಾರಣವಾಗಬಹುದು ಆದ್ದರಿಂದ ಕೆಫಿನ್ಯುಕ್ತ ಪದಾರ್ಥಗಳ ಸೇವನೆ ಬಗ್ಗೆ ಗಮನಹರಿಸುವುದು ಅಥವಾ ಅವುಗಳನ್ನು ನಿಷೇಧಿಸುವುದು ಉತ್ತಮ.

### ಎನರ್ಜಿ ಡ್ರಿಂಕ್ಸ್ ಬೇಡ

ಅಧಿಕ ಸಕ್ಕರೆ,ಕೆಫೀನ್ ಪಾನೀಯಗಳು ನಿಮಗೆ ತ್ವರಿತ ಝೇಂಕಾರವನ್ನು ನೀಡುವಂತೆ ಕಾಣಿಸಬಹುದು ಆದರೆ ಸರಿಯಾದ ಆಹಾರ ಮತ್ತು ದ್ರವಕ್ಕೆ ಇವು ಕಳಪೆ ಪರ್ಯಾಯ ವಾಗಿವೆ.

### ಆಲ್ಕೋಹಾಲ್ ಸಲ್ಲದು

ಕೆಲವು ಪಾನಿಯಾಗಳಲ್ಲಿ ಲಘು ಪ್ರಮಾಣದ ಆಲ್ಕೋಹಾಲ್ ಇರಬಹುದು ಇದನ್ನು ಸೇವಿಸಿದಾಗ ನಿಮಗೆ ಆರಾಮದಾಯಕವೆನಿಸಬಹುದು ಆದರೆ ಆಲ್ಕೊಹಾಲ್ಯುಕ್ತ ಪಾನೀಯಗಳು ನಿಮ್ಮನ್ನು ನಿರ್ಜಲೀಕರಣಗೊಳಿಸುತ್ತದೆ,ನಿಮ್ಮ ನಿದ್ರೆಯನ್ನು ಕುಂಠಿತಗೊಳಿಸುತ್ತದೆ ಮತ್ತು ಮರುದಿನ ನಿಮ್ಮ ಏಕಾಗ್ರತೆಯನ್ನು ಹಾಳು ಮಾಡಬಹುದು.
ಪರೀಕ್ಷಾ ಸಮಯದಲ್ಲಿ ಇದ್ದಕ್ಕಿದ್ದಂತೆ ಆಹಾರದಲ್ಲಿನ ಬದಲಾವಣೆಗಳು ಸರಿಯಾದ ಕ್ರಮವಲ್ಲ,ಸರಿಯಾದ ಮಾರ್ಗದರ್ಶನ ಪಡೆದು ಕ್ರಮದಲ್ಲಿ ಅನುಸರಿಸಿದರೆ ಯಶಸ್ಸು ನಿಮ್ಮದಾಗುತ್ತದೆ ಪರೀಕ್ಷೆಗೆ ಮುಂಚಿತವಾಗಿ ರೂಡಿಸಿಕೊಂಡರೆ ಅನುಕೂಲ ಹೆಚ್ಚು.

ಕವಿ ಮನಸು

## ಅಮ್ಮನು ನೀಡುವ ತಿನಿಸು

ಶಾಲೆಗೆ ಹೋಗುವ ಕಂದನೆ ಅರಿತುಕೊ
ಸಿರಿತನ ಎನುವುದು ಆರೋಗ್ಯ
ತಿನ್ನಲು ಕುಡಿಯಲು ಸಂಯಮವಿದ್ದರೆ
ಬದುಕಲಿ ದೊರೆವುದು ಈ ಭಾಗ್ಯ

ರಸ್ತೆಯ ಬದಿಯಲಿ ಮಾರಲು ಇಡುವರು
ಬಗೆಬಗೆ ಬಣ್ಣದ ತಿನಿಸುಗಳ
ಮನವನು ಸೆಳೆಯುವ ತರದಲಿ ಇರುವುದು
ಹಚ್ಚುತ ವಿಷಕರ ಬಣ್ಣಗಳ

ತಿನ್ನುವ ಬಯಕೆಯ ನುಡಿ ನೀ ನನ್ನಲಿ
ಮಾಡುವೆ ನಾನೇ ಮನೆಯಲ್ಲಿ
ಮನೆಯಲಿ ಮಾಡಿದ ಇಷ್ಟದ ತಿಂಡಿಯ
ತಿನ್ನುವ ನಾವು ಜೊತೆಯಲ್ಲಿ

ಹಸುವಿನ ಹಾಲನು ಕಾಯಿಸಿ ಕೊಡುವೆನು
ಕುಡಿಯಲು ಕೊಡುವೆನು ದಿನನಿತ್ಯ
ಅಮ್ಮನು ನೀಡಿದ ತಿನಿಸದು ಉತ್ತಮ
ಶಕ್ತಿಯ ಪಡೆಯುವೆ ಇದು ಸತ್ಯ॥

– ಪೆರ್ಮುಖ ಸುಬ್ರಹ್ಮಣ್ಯ ಭಟ್

## ಧ್ವನಿ



ಅಂದು ಅಮ್ಮನ ಉಪದೇಶದ ಮಾತು
ಮನೆಯ
ಮಕ್ಕಳಿಗೆ ಕಿರಿಕಿರಿ ಉಂಟು ಮಾಡುವ
ಕೀರಲು ಧ್ವನಿ.
ಇಂದು ನಾ ತಾಯಿಯಾಗಿ ಅದೇ ಮಾತು
ಮಗಳಿಗೆ
ಹೇಳುವಾಗ ಅಮ್ಮನ ನೆನಪು ಆಯಿತು
ಮಾರ್ದನಿ.

– ಮಂಜುಶ್ರೀ ಮುರಳೀಧರ್
ತೋರಣಗಲ್ಲು,ಬಳ್ಳಾರಿ.

## ಕನಕಗಿರಿ ಉತ್ಸವ: ಫೆ.28ಕ್ಕೆ ಕ್ರೀಡಾಕೂಟ ಉದ್ಘಾಟನೆ

**ಹಂಪಿ ಟೈಮ್ಸ್ ಕೊಪ್ಪಳ**

ಕನಕಗಿರಿ ಉತ್ಸವ-2024ರ ಅಂಗವಾಗಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು ಮತ್ತು ಕೊಪ್ಪಳ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಸಂಯುಕ್ತಾಶ್ರಯದಲ್ಲಿ ಫೆಬ್ರವರಿ 28 ರಿಂದ ಮಾರ್ಚ್ 3ರ ವರೆಗೆ ಹಮ್ಮಿಕೊಳ್ಳಲಾದ ಉತ್ಸವದ ಕ್ರೀಡಾಕೂಟದ ಉದ್ಘಾಟನಾ ಸಮಾರಂಭವನ್ನು ಫೆಬ್ರವರಿ 28ರಂದು ಬೆಳಿಗ್ಗೆ 10 ಗಂಟೆಗೆ ನಡೆಯಲಿದೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಕೊಪ್ಪಳ ಜಿಲ್ಲಾಡಳಿತದಿಂದ 2024ರ ಕನಕಗಿರಿ ಉತ್ಸವವು ಮಾರ್ಚ್ 2 ಮತ್ತು ಮಾ.3ರಂದು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವರು ಹಾಗೂ ಕೊಪ್ಪಳ ಜಿಲ್ಲಾ ಉಸ್ತುವಾರಿ ಸಚಿವರಾದ ಶಿವರಾಜ್ ಎಸ್ ತಂಗಡಗಿ ಅವರು ಚಾಲನೆ ನೀಡುವರು. ಕ್ರೀಡೆಗಳ ವಿವರ: ಫೆ.28ರಂದು ಪುರುಷ ಮತ್ತು ಮಹಿಳಾ ವಿಭಾಗದಲ್ಲಿ ಕುಸ್ತಿ, ವಾಲಿಬಾಲ್, ಕಬಡ್ಡಿ, ಹ್ಯಾಂಡಬಾಲ್ ಮತ್ತು ಪುರುಷರ ವಿಭಾಗದಲ್ಲಿ ಬಾಲ್ ಬ್ಯಾಡ್ಮಿಂಟನ್, ಮಲ್ಲಕಂಬ ಕ್ರೀಡೆಗಳು ನಡೆಯಲಿವೆ. ಫೆ.29ಕ್ಕೆ ಪುರುಷರು ವಿಭಾಗದಲ್ಲಿ ಮಲ್ಲಕಂಬ, ಹಗ್ಗ ಜಗ್ಗಾಟ ಹಾಗೂ ಸಂಗ್ರಾಣಿ ಕಲ್ಲು ಎತ್ತುವ ದೇಶಿಕ್ರೀಡೆಗಳು ಮತ್ತು ಮಹಿಳಾ ವಿಭಾಗದಲ್ಲಿ ಆಹ್ವಾನಿತ ಲೆಗ್ ಕ್ರಿಕೆಟ್ ಮತ್ತು ಅಂದು ಜನಪ್ರತಿನಿಧಿಗಳ, ಅಧಿಕಾರಿಗಳ ಹಾಗೂ ಮಾದ್ಯಮದವರ ಕ್ರಿಕೆಟ್ ಪಂದ್ಯಾವಳಿಗಳು ಜರುಗಲಿವೆ. ನಿರ್ದೇಶಕರಾದ ವಿಠ್ಠಲ್ ಜಾಬಗೌಡ್ರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಆಯ್ಕೆಗಳಿಲ್ಲದ ಬದುಕು



ಆಕೆ ಅತ್ಯಂತ ಪ್ರತಿಭಾವಂತ ವಿದ್ಯಾರ್ಥಿನಿ. ಒಂದನೇ ತರಗತಿಯಿಂದ ಹತ್ತನೇ ತರಗತಿಯವರೆಗೆ ಮೊದಲ ಸ್ಥಾನವನ್ನು ಬಿಟ್ಟುಕೊಡದ ಆಕೆ ಹತ್ತನೇ ತರಗತಿಯಲ್ಲಿ ಅತಿಹೆಚ್ಚಿನ ಅಂಕಗಳನ್ನು ಗಳಿಸಿ ತನ್ನ ಶಾಲೆಗೆ ಮೊದಲಿಗಳಾದಳು.ತನ್ನೂರಿನ ಸರಕಾರಿ ಪಿಯು ಕಾಲೇಜಿನಲ್ಲಿ ವಿಜ್ಞಾನ ವಿಷಯದಲ್ಲಿ ಪ್ರವೇಶ ಪಡೆದ ಆಕೆಯ ಗುರಿ ವೈದ್ಯಕೀಯ ಪದವಿ ಪಡೆದು ವೈದ್ಯಳಾಗಿ ಸೇವೆ ಸಲ್ಲಿಸಬೇಕೆಂಬ ಆಕಾಂಕ್ಷೆ.

ಮುಂದೆ ಪಿಯುಸಿಯಲ್ಲಿಯೂ,ಸಿಇಟಿ ಪರೀಕ್ಷೆಯಲ್ಲಿ ಒಳ್ಳೆಯ ಅಂಕಗಳನ್ನು ಪಡೆದಳು ನಿಜ, ಆದರೆ ಆಕೆಗೆ ವೈದ್ಯಕೀಯ ಪ್ರವೇಶಕ್ಕೆ ಬೇಕಾದ ಅರ್ಹತಾ ಅಂಕಗಳು ದೊರೆಯಲಿಲ್ಲ. ಅತ್ಯಂತ ಬಡತನದ ಹಿನ್ನೆಲೆಯಿಂದ ಬಂದ ಆಕೆಗೆ ಇದುವರೆಗೂ ಸರ್ಕಾರ ಕೊಡ ಮಾಡುವ ಉಚಿತ ಶಿಕ್ಷಣ ಯೋಜನೆಯಡಿ ವಿದ್ಯಾಭ್ಯಾಸ ದೊರೆತಿತ್ತು, ಆದರೆ ಉನ್ನತ ಶಿಕ್ಷಣ ಆಕೆಯ ಪಾಲಿಗೆ ಗಗನ ಕುಸುಮವೇ ಸರಿ.

ಕೂಲಿ ನಾಲಿ ಮಾಡಿ ಜೀವನ ಸಾಗಿಸುತ್ತಿದ್ದ ಆಕೆಯ ಪಾಲಕರು ಆಕೆಗೆ ಹೇಗಾದರೂ ಮಾಡಿ ಒಂದು ಡಿಗ್ರಿ ಪೂರೈಸಿ ಯಾವುದಾದರೂ ಶಾಲೆಯಲ್ಲಿ ಇಲ್ಲವೇ ಕಚೇರಿಯಲ್ಲಿ ನೌಕರಿ ಮಾಡಲು ಹೇಳಿದರು. ಎರಡು ಹೊತ್ತಿನ ಊಟಕ್ಕೂ ಅನುಕೂಲವಿಲ್ಲದ ಪರಿಸ್ಥಿತಿಗಳಿರುವ ಲಕ್ಷಾಂತರ ಕುಟುಂಬಗಳ ಮಕ್ಕಳು ವಿದ್ಯೆಯಿಂದ ವಂಚಿತರಾಗುತ್ತಿದ್ದಾರೆ. ಅದೆಷ್ಟೇ ಸರಕಾರಗಳು ಯೋಜನೆಗಳನ್ನು ಹಾಕಿಕೊಂಡರೂ ಉನ್ನತ ಶಿಕ್ಷಣದ ಕನಸು ನನಸಾಗುತ್ತಿಲ್ಲ.... ಇದಕ್ಕೆಲ್ಲ ಕಾರಣ ಬಡತನ.

ಸರಕಾರಿ ದಾಖಲೆಗಳ ಪ್ರಕಾರ ಅತಿ ಹೆಚ್ಚು ಆರೋಗ್ಯ ತೊಂದರೆಗಳನ್ನು ಅನುಭವಿಸುತ್ತಿರುವವರು ಬಡವರು. ಬಡತನದ ಬದುಕು ಒಂದು ಸರಪಣಿ ಕ್ರಿಯೆ ಇದ್ದಂತೆ. ನಾವು ಚಿಕ್ಕಂದಿನಲ್ಲಿ ಪ್ರೌಢಶಾಲೆಯಲ್ಲಿ ಓದುತ್ತಿದ್ದಾಗ ಸಮಾಜಶಾಸ್ತ್ರ ತರಗತಿಯಲ್ಲಿ ಬಡತನ, ನಿರುದ್ಯೋಗ, ಮೂಢನಂಬಿಕೆ, ಆಹಾರ ಧಾನ್ಯಗಳ ಕೊರತೆ ಇವುಗಳ ಕುರಿತು ನಮ್ಮ ಗುರುಗಳು ಪಾಠ ಮಾಡುತ್ತಿದ್ದಾಗ ನಾವು ನಮ್ಮ ಗುರುಗಳಿಗೆ ಕೇಳ್ತಾ ಇದ್ದದ್ದು ಇದೆಲ್ಲ ತೊಂದರೆಗಳಿವೆಯೆ ಅಂತ. ಯಾಕೆಂದರೆ ಪ್ರತಿ ತಿಂಗಳು ಸಂಬಳ ಪಡೆವ ನೌಕರರ ಮಕ್ಕಳಿಗೆ, ವ್ಯಾಪಾರ ವ್ಯವಹಾರಗಳಲ್ಲಿ ತೊಡಗಿಸಿಕೊಂಡಿರುವವರ ಮಕ್ಕಳಿಗೆ ಈ ಎಲ್ಲಾ ತೊಂದರೆಗಳ ಅರಿವು ಅಷ್ಟಾಗಿ ಇರುವುದಿಲ್ಲ. ಇವೆಲ್ಲವೂ ಆ ಮಕ್ಕಳ ಪಾಲಿಗೆ ಫ್ಯಾನ್ಸಿ ಪದಗಳಂತೆ ತೋರಿದರೆ ಅಚ್ಚರಿಯೇನಿಲ್ಲ. ಯಾಕೆಂದರೆ ಅವರೆಲ್ಲ ಸಮಾಜದ ಕೆನೆ ಪದರಿನಲ್ಲಿ ಬದುಕುವವರು. ಯಾರಾದರೂ ಶ್ರೀಮಂತರಿಗೆ ಮೈಯಲ್ಲಿ ದೇವರು ಕಾಣಿಸಿಕೊಂಡಿದ್ದಾಳೆಯೆ?! ದೇವರು ಮುನಿಸಿಕೊಂಡಿದ್ದಾನೆಯೇ??

ಖಂಡಿತವಾಗಿಯೂ ಇಲ್ಲ. ಬಡವರ ಮಕ್ಕಳಿಗೆ ಪಾಲಕರ ಬಡತನ ಮತ್ತು ಅಜ್ಞಾನದ ಕೊರತೆಯಿಂದ ಪೌಷ್ಟಿಕ ಆಹಾರ ದೊರೆಯದೆ ಹೋದಾಗ, ಸ್ವಚ್ಛತೆಯ ಅರಿವಿನ ಕೊರತೆ ಇದ್ದಾಗ ಆ ಮಕ್ಕಳು ಪದೇ ಪದೇ ಅನಾರೋಗ್ಯಕ್ಕೆ ಈಡಾಗುತ್ತಾರೆ. ಇದನ್ನು ಅರಿಯದ ಬಡ ಜನತೆ ಯಾವುದೋ ದೇವಿಯ ಮುನಿಸು, ಕಾಡಾಟ ಈ ರೀತಿ ತಮ್ಮ ಮಕ್ಕಳನ್ನು ಬಲಿ ತೆಗೆದುಕೊಳ್ಳುತ್ತದೆ ಎಂಬ ಮೌಢ್ಯತೆಯನ್ನು,ಭಯವನ್ನು ಹೊಂದಿ ಮಕ್ಕಳ ಆರೋಗ್ಯ ಸುಧಾರಿಸಲು ಹರಕೆ ಕಟ್ಟಿಕೊಳ್ಳುತ್ತಾರೆ. ಇನ್ನೂ ಕೆಲವೊಮ್ಮೆ ದೇವರಿಗೆ ತಮ್ಮ ಮಕ್ಕಳನ್ನು ಬಿಡುವುದಾಗಿ ಕೂಡ ಹರಸಿಕೊಳ್ಳುತ್ತಾರೆ ಇದಂತೂ ಮಾನವ ಸಮಾಜದ ಅತ್ಯಂತ ಕ್ರೌರ್ಯದ ಪರಾಕಾಷ್ಠೆ ಎನ್ನಬಹುದು.ಇದು ಒಂದು ರೀತಿಯಲ್ಲಿ ನೋವಿನ ಮೂಲ ಅರಿಯದೆ ಔಷಧಿ ಕೊಟ್ಟಂತೆ.ನೋವು ತಾತ್ಕಾಲಿಕವಾಗಿ ಉಪಶಮನ ಹೊಂದಬಹುದು... ಆದರೆ ಅದರ ಮೂಲದಲ್ಲಿ ನೋವು ಇನ್ನೂ ಜೀವಂತವಾಗಿ ಇರುತ್ತದೆ.

ಪ್ರತಿಯೊಂದು ಕುಟುಂಬದಲ್ಲಿನ ಪತಿ ಎನ್ನಿಸಿಕೊಂಡ ಜೀವಿ ಯಾವುದೇ ದುಶ್ಚಟಗಳನ್ನು ಹೊಂದಿರದೆ ಇದ್ದರೆ ಅದು ಆ ಕುಟುಂಬದ ಪಾಲಿಗೆ ಬೋನಸ್ ಇದ್ದಂತೆ ಇಲ್ಲದೆ ಹೋದರೆ ಅದೆಷ್ಟೇ ದುಡಿದರೂ ಆತನ ದುಡಿಮೆಯ ಹಣ ಧೂಮ್ರಪಾನ, ಮದ್ಯಪಾನ, ಜರ್ದಾ ಬೀಡಗಳ ಸೇವನೆ, ಜೂಜಾಟ ಮುಂತಾದ ದುರ್ವ್ಯಸನಗಳ ಪಾಲಾಗುತ್ತದೆ. ಆಗ ಆ ಮನೆಯ ಹೆಣ್ಣುಮಗಳು ಅವರಿವರ ಮನೆಗಳಲ್ಲಿ, ಕಟ್ಟಡ ನಿರ್ಮಾಣ ಕಾಮಗಾರಿಗಳಲ್ಲಿ, ಹೊಲಗಳಲ್ಲಿ ಕೆಲಸ ಮಾಡಿ ಕುಟುಂಬ ನಿರ್ವಹಣೆ ಮಾಡಬೇಕಾಗುತ್ತದೆ. ಅಷ್ಟಾಗಿಯೂ ನೆಮ್ಮದಿಯ ಜೀವನ ದುಸ್ತರ. ಮೊದಮೊದಲು ಕುಡಿತದಂತಹ ದುರ್ವ್ಯಸನಗಳಿಗೆ ತುತ್ತಾದ ವ್ಯಕ್ತಿ ಕೆಲಸಕ್ಕೆ ಹೋಗುವುದು ಕಡಿಮೆಯಾಗಿ ಮಾಲೀಕರ ನಿರೀಕ್ಷೆಗೆ ತಕ್ಕಂತೆ ಕಾರ್ಯನಿರ್ವಹಿಸದೆ ಹೋದಾಗ ಅವರನ್ನು ಕೆಲಸದಿಂದ ತೆಗೆದು ಹಾಕುತ್ತಾರೆ.



ವೀಣಾ ಹೇಮಂತಗೌಡ ಪಾಟೀಲ್
ಲೇಖಕರು, ಮುಂಡರಗಿ, ಗದಗ

Scan For Digital Colourful
HAMPI TIMES E-paper

ಇಂತಹ ಪರಿಸ್ಥಿತಿಯಲ್ಲಿ ಆತ ಮೊದಮೊದಲು ಹೆಂಡತಿಯನ್ನು ಪೀಡಿಸಿ ಕಾಡಿಸಿ ತನ್ನ ಚಟಗಳನ್ನು ಪೂರೈಸಿಕೊಂಡರೆ ನಂತರ ಮನೆಯ ಸಣ್ಣ ಪುಟ್ಟ ವಸ್ತುಗಳನ್ನು ಕದ್ದು ಮಾರಿ, ಹೆಂಡತಿಯನ್ನು ಹೊಡೆದು ಬಡಿದು ಹಣವನ್ನು ಕಿತ್ತುಕೊಂಡು ತನ್ನ ಚಟಗಳನ್ನು ಪೂರೈಸಿಕೊಳ್ಳುತ್ತಾನೆ. ಅಂತಹ ಕುಟುಂಬಗಳಲ್ಲಿ ಅನಪೇಕ್ಷಣೀಯ ಘಟನೆಗಳು ಸರ್ವೇಸಾಮಾನ್ಯವಾಗಿದ್ದು ಆ ಕುಟುಂಬದ ಮಕ್ಕಳು ಇದರ ಬಲಿಪಶುಗಳಾಗುವುದಲ್ಲದೆ ಮುಂದೆ ದೊಡ್ಡವರಾದ ಮೇಲೆ ಸಮಾಜ ಬಾಹಿರ ಕೃತ್ಯಗಳಲ್ಲಿ ತೊಡಗಿಕೊಳ್ಳುತ್ತಾರೆ.

ಇನ್ನು ಹಲವು ಜನ ಹೆಣ್ಣುಮಕ್ಕಳು ಮೂಲಭೂತ ಅವಶ್ಯಕತೆಗಳ ಪೂರೈಕೆಯಲ್ಲಿ ತಮ್ಮ ಇಡೀ ಜೀವನವನ್ನು ಸವೆಸುತ್ತಾರೆ. ಬೇರೆಯವರ ಮನೆ ಕಸ ಗುಡಿಸಿ, ನೆಲ ಒರೆಸಿ, ಪಾತ್ರೆ ಬಟ್ಟೆಗಳನ್ನು ಸ್ವಚ್ಛವಾಗಿ ತೊಳೆದು ಪಳಪಳ ಹೊಳೆಯುವಂತೆ ಮಾಡುವ ಇವರ ಮತ್ತು ಇವರ ಮಕ್ಕಳ ಭವಿಷ್ಯ ಮಾತ್ರ ಮಸುಕಾಗಿರುತ್ತದೆ.

ಇನ್ನು ಹಲವೆಡೆ ಬಡತನ ಅತಿಯಾಗಿ ತಾಂಡವವಾಡುತ್ತಿದ್ದು ಹೊಟ್ಟೆಗಿದ್ದರೆ ಬಟ್ಟೆಗಿಲ್ಲ ಎಂಬಂತಹ ಪರಿಸ್ಥಿತಿ. ದೊಡ್ಡ ಊರುಗಳಲ್ಲಿ ಸಣ್ಣಪುಟ್ಟ ಕೆಲಸಗಳನ್ನು ಮಾಡಿಕೊಂಡು ಹೋಗುವವರಿಗೆ ಸಂಪಾದನೆ ಚೆನ್ನಾಗಿರುತ್ತದೆ ಎಂದು ಹೇಳುವಂತಿಲ್ಲ, ಆದರೆ ಮಹಾನಗರಗಳಲ್ಲಿ ವಾಸಿಸುವವರು ಆ ನಗರದ ಸ್ಲಮ್ಮುಗಳಲ್ಲಿಯೂ ಕೂಡ ದುಬಾರಿ ಬಾಡಿಗೆ, ವಿದ್ಯುತ್ ಬಿಲ್, ನೀರಿನ ಬಿಲ್ ಕಟ್ಟುವಲ್ಲಿ ತಮ್ಮ ಸಂಪಾದನೆಯ ಬಹುಪಾಲು ಹಣವನ್ನು ಕಳೆದುಕೊಳ್ಳುತ್ತಾರೆ. ಇದರ ಮೇಲೆ ದಿನಸಿ, ಮಕ್ಕಳ ಶಾಲೆ ಕಾಲೇಜುಗಳ ಶುಲ್ಕ, ಹೋಗಿ ಬರುವ ಬಸ್ ಚಾರ್ಜ್ ಹೀಗೆ ಹತ್ತು ಹಲವು ಖರ್ಚುಗಳು ಅವರನ್ನು ಹಿಂಡಿ ಹಿಪ್ಪೆ ಮಾಡುತ್ತವೆ.

ಹಳ್ಳಿಯೂರುಗಳಲ್ಲಿ ಸಾಕಷ್ಟು ಕೆಲಸ ಕಾರ್ಯಗಳು ದೊರೆಯುತ್ತವೆ ಎಂಬುದು ಕೂಡ ಸುಳ್ಳಾಗಿದೆ. ಬಾರದ ಮಳೆ, ಆಳುಗಳ ಕೊರತೆ, ಸಮಯಕ್ಕೆ ಸರಿಯಾಗಿ ಸಿಗದ ಬೀಜ ಗೊಬ್ಬರಗಳು, ದನ ಕರುಗಳಿಗೆ ಮೇವನ್ನು ಪೂರೈಸಲಾಗದ ಅಸಹಾಯಕತೆ ಒಕ್ಕಲುತನ ಮಾಡಲು ರೈತರು ಹಿಂದೇಟು ಹಾಕುವಂತೆ ಮಾಡಿದೆ.ಬೆಳೆದ ಬೆಳೆ ಕೈಗೆ ಹತ್ತುವವರೆಗೆ ಹಲವು ರೀತಿಯಲ್ಲಿ ಹಣ ಖರ್ಚಾಗುತ್ತದೆ. ಇನ್ನು ಬೆಳೆ ಬಂದ ನಂತರ ಅದನ್ನು ಕೊಯ್ದು ಮಾರುಕಟ್ಟೆಗೆ ಸಾಗಿಸುವ,ನಂತರ ದಲ್ಲಾಳಿಗಳ ಮೂಲಕ ಅದನ್ನು ಮಾರುವ ಹೊತ್ತಿಗೆ ರೈತ ಸೋತು ಸುಣ್ಣವಾಗಿರುತ್ತಾನೆ. ಆತನ ಸಂಪಾದನೆಗಿಂತ ಎಷ್ಟೋ ಬಾರಿ ಆತನ ಖರ್ಚೆ ಹೆಚ್ಚಾಗಿರುವುದರಿಂದ ಆತನ ಶ್ರಮಕ್ಕೆ ಬೆಲೆ ಇಲ್ಲದಂತಾಗುತ್ತದೆ. ಇದು ಕೂಡ ಒಕ್ಕಲುತನ ಅನಾಕರ್ಷಕವಾಗಿರಲು ಕಾರಣವಾಗಿದೆ. ರೈತಾಪಿ ಕೆಲಸಗಳು, ದನಕರುಗಳ ನಿರ್ವಹಣೆ, ಆಳುಗಳ ಜಾಗದಲ್ಲಿ ತಾವೇ ದುಡಿಯಬೇಕಾದ ಅನಿವಾರ್ಯತೆ ರೈತಾಪಿ ಜೀವನದ ಅನಿಶ್ಚಿತ ಆದಾಯ ಇವುಗಳ ಪರಿಣಾಮವಾಗಿ ರೈತರ ಮಕ್ಕಳಿಗೆ ವಧು ದೊರೆಯುವುದು ಕೂಡ ಕಷ್ಟವಾಗಿದೆ.

ಆದ್ದರಿಂದಲೇ ಹಲವಾರು ರೈತರ ಮಕ್ಕಳು ವಿದ್ಯೆ ಕಲಿಯದಿದ್ದರೂ ಹೊಲದಲ್ಲಿ ಮೈಬಗ್ಗಿಸಿ ದುಡಿಯಲು ಒಪ್ಪದೇ ಮಹಾನಗರಗಳ ದೊಡ್ಡ ದೊಡ್ಡ ಆಫೀಸ್ ಗಳಲ್ಲಿ, ಮಾಲ್ಗಳಲ್ಲಿ, ಕಸಗುಡಿಸುವ ನೆಲ ಒರೆಸುವ ದಿನಗೂಲಿ ನೌಕರರಾಗಿ, ಆಫೀಸ್ ಬಾಯ್ಗಳಾಗಿ ಸೆಕ್ಯೂರಿಟಿ ಗಾರ್ಡ್ ಗಳಾಗಿ ಕಾರ್ಯನಿರ್ವಹಿಸುವ ಕೆಲಸ ಮಾಡುತ್ತಾರೆ. ಇನ್ನು ಉತ್ತರ ಕರ್ನಾಟಕದ ಹಲವು ಭಾಗಗಳಲ್ಲಿ ಜನರು ಕಾಫೀ ಸೀಮೆಗೆ, ಬೆಂಗಳೂರಿನಂತಹ ಮಹಾನಗರಗಳಿಗೆ ತಮ್ಮ ಜೀವನ ನಿರ್ವಹಣೆಗಾಗಿ ಗುಳೇ ಹೋಗುತ್ತಾರೆ. ಅಂತಹ ಮನೆಗಳಲ್ಲಿ ವಯಸ್ಸಾದ ಹಿರಿಯರು ಮತ್ತು ಶಾಲೆಗಳಲ್ಲಿ ಓದುವ ಮಕ್ಕಳು ಮಾತ್ರ ಇರುತ್ತಾರೆ.

ಇನ್ನು ಸಣ್ಣ ಪುಟ್ಟ ಊರುಗಳಲ್ಲಿ ಕೆಲಸ ಮಾಡುವ ಜನರಿಗೆ ಕೆಲಸಗಳೇನೋ ಸಾಕಷ್ಟಿವೆ ಆದರೆ ಮಾಡುವ ಮನಸ್ಥಿತಿಯಲ್ಲಿ ಅವರಿಲ್ಲ.ಅವರಿಗೆ ಸಂಬಳ ಕೊಡುವ ಮಾಲೀಕರು ಒಂದು ದಿನದ ರಜೆಯನ್ನು ಕೂಡ ಕೊಡದೆ ದುಡಿಸಿಕೊಳ್ಳುತ್ತಾರೆ, ಮುಂದೆ ನಿಂತು ಕೆಲಸ ಮಾಡಿಸಿಕೊಳ್ಳುತ್ತಾರೆ ಪ್ರತಿದಿನ ಅವರ ಕಿರಿಕಿರಿ ಅನುಭವಿಸಬೇಕು ಎಂಬ ನೆವಗಳು ಅವರಲ್ಲಿ. ಅಷ್ಟಾಗಿಯೂ ಮಾಲೀಕ ಮತ್ತು ಕೆಲಸಗಾರರ ನಡುವೆ ಒಂದು ಸೌಹಾರ್ದಯುತ ಸಂಬಂಧ ಏರ್ಪಡುವುದು ತಾವು ಪರಸ್ಪರ ಅವಲಂಬಿತರು ಎಂಬ ಅರಿವು ಇಬ್ಬರಲ್ಲಿಯೂ ಮೂಡಿದರೆ ಮಾತ್ರ ಜೀವನ ಸುಗಮ.

ಒಂದು ಕುಟುಂಬದ ಗಂಡ ಹೆಂಡತಿ ಇಬ್ಬರೂ ದುಡಿದರೆ ಆ ಕುಟುಂಬ ಸಾಕಷ್ಟು ಅನುಕೂಲಕರ ಸ್ಥಿತಿಯಲ್ಲಿ ಇರಬಹುದು ಎಂದು ಭಾವಿಸಿದರೆ ಅದು ತಪ್ಪಾಗುತ್ತದೆ. ಮನೆಯ ಬಾಡಿಗೆ, ದಿನಸಿಯ ಖರ್ಚು, ಸಾರಿಗೆ ವೆಚ್ಚ ಹೀಗೆ ಅವರು ದುಡಿದ ಹಣ ನೀರಿನಂತೆ ಸೋರಿ ಹೋಗುತ್ತದೆ. ಅದರಲ್ಲೂ ಕುಟುಂಬದ ಯಜಮಾನ ಎನಿಸಿಕೊಂಡ ಗಂಡಸು ಪ್ರಾಣಿ ಕುಡಿತ, ಧೂಮ್ರಪಾನಗಳಂತಹ ಚಟಗಳಿಗೆ ದಾಸನಾಗಿದ್ದರೆ ಆ ಮನೆಯ ಪರಿಸ್ಥಿತಿ ಇನ್ನೂ ಅಸ್ತವ್ಯಸ್ತ. ಕುಟುಂಬದ ಹೆಣ್ಣು ಮಕ್ಕಳು ಕುಡಿದು ತೂರಾಡುತ್ತ ತನ್ನ ಸಂಬಳದ ಹಣವನ್ನು ಖಾಲಿ ಮಾಡಿ ಬರುವ ಗಂಡನ ಹೊಡೆತ ಬಡಿತಗಳಿಗೆ, ಕೆಟ್ಟ ಮಾತುಗಳಿಗೆ ಈಡಾಗುತ್ತಾ ತನ್ನ ಮಕ್ಕಳನ್ನು ಸಂಭಾಳಿಸಿಕೊಂಡು ಬದುಕಬೇಕಾದ ದುಸ್ಥಿತಿ ಆಕೆಯ ಶತ್ರುವಿಗೂ ಬೇಡ ಎಂಬಂತೆ ಭಾಸವಾಗುತ್ತದೆ. ಇದರ ಮೇಲೆ ಆಗಾಗ ಕಾಡುವ ಅನಾರೋಗ್ಯ ಇವರನ್ನು ಸಾಲದ ಸುಳಿಗೆ ಸಿಲುಕಿಸುತ್ತದೆ. ದೈಹಿಕವಾಗಿ ದುಡಿದು ದಣಿವ ಜನ ಮಾನಸಿಕವಾಗಿಯೂ ಹೈರಾಣಾಗುತ್ತಾರೆ.

ಗಾಯದ ಮೇಲೆ ಬರೆ ಎಳೆದಂತೆ ರೂಢಿಗತವಾಗಿ ಬಂದಿರುವ ಕೆಲ ನಂಬಿಕೆಗಳು, ಸಾಮಾಜಿಕ ಮೌಢ್ಯಗಳು ಅವರನ್ನು ಮೇಲಕ್ಕೇಳಲು ಬಿಡುವುದೇ ಇಲ್ಲ. ಸಮಾಜದಲ್ಲಿ ತುಂಬಿರುವ ಬಡತನ, ಅಜ್ಞಾನ, ನಿರುದ್ಯೋಗ ಸಮಸ್ಯೆಗಳು ಹೆಚ್ಚಾಗುತ್ತಲೇ ಹೋಗುತ್ತಿವೆ. ಪರಿಣಾಮವಾಗಿ ಸಾಂಗತ್ಯ ದೋಷಕ್ಕೆ ಗುರಿಯಾಗುವ ಮನುಷ್ಯ ದುಶ್ಚಟಗಳ ದಾಸನಾಗುತ್ತಾನೆ ಇದರ ಪರಿಣಾಮವಾಗಿ ಕುಟುಂಬಗಳಲ್ಲಿ ಯಾವಾಗಲೂ ಕಹಿ ವಾತಾವರಣ ಏರ್ಪಟ್ಟು ಪತಿ-ಪತ್ನಿಯರ ನಡುವಿನ ಜಗಳಗಳು ಮಕ್ಕಳ ಮೇಲೆ ಮಾನಸಿಕ ಪರಿಣಾಮವನ್ನುಂಟು ಮಾಡಿ ಆ ಮಕ್ಕಳು ಕೂಡ ಸಮಾಜ ಬಾಹಿರ ಕೃತ್ಯಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಳ್ಳುವಂತಹ ಪರಿಸ್ಥಿತಿ ಏರ್ಪಡುತ್ತದೆ. ಇಂತಹ ಮಕ್ಕಳೇ ಮುಂದೆ ಬಾಲಾಪರಾಧಿಗಳಾಗಿ ರಿಮ್ಯಾಂಡ್ ಹೋಂಗಳಲ್ಲಿ ಭರ್ತಿಯಾಗುವ ಸಂಭವಗಳು ಹೆಚ್ಚು. ಒಂದು ಬಾರಿ ಪೊಲೀಸ್ ಇಲಾಖೆಯ ಕಪ್ಪು ಹಲಗೆಯ ಮೇಲೆ ಹೆಸರು ಬಂದು ಹೋದರೆ ಜೀವನ ಪೂರ್ತಿ ಕಳಂಕವನ್ನು ಹೊತ್ತು ಬದುಕಬೇಕಾಗುತ್ತದೆ.

ಆದ್ದರಿಂದಲೇ ನಮ್ಮ ಭಾರತ ಸರ್ಕಾರ ಹಸಿವು ನಿರ್ಮೂಲನೆ ಯೋಜನೆಯಡಿ ಎಲ್ಲರಿಗೂ ನಿಗದಿತ ಪ್ರಮಾಣದ ಪಡಿತರವನ್ನು ನೀಡುಲಾಗುತ್ತಿದೆ. ಇದರ ಜೊತೆ ಜೊತೆಗೆ ಶಾಲೆಗಳಿಗೆ ಹಾಜರಾಗುವ ಮಕ್ಕಳಿಗೆ ಮಧ್ಯಾಹ್ನದ ಬಿಸಿಯೂಟ, ಹಾಲು, ತತ್ತಿ ಬಾಳೆಹಣ್ಣುಗಳಂತಹ ಪೌಷ್ಟಿಕ ಆಹಾರದ ಸರಬರಾಜು ಮಾಡುತ್ತದೆ. ಸರ್ಕಾರಿ ಆಸ್ಪತ್ರೆಗಳಲ್ಲಿ ಉಚಿತ ಚಿಕಿತ್ಸೆಗೆ, ಔಷಧಿಗೆ ಅವಕಾಶ ಮಾಡಿಕೊಟ್ಟಿದೆ. ಜೊತೆಗೆ ಪ್ರಾಥಮಿಕ ಮತ್ತು ಪ್ರೌಢ ಹಂತದ ಶಿಕ್ಷಣ ಕೂಡ ಉಚಿತವಾಗಿದ್ದು ಉನ್ನತ ಶಿಕ್ಷಣದ ಕನಸು ಕಾಣುವ ಮಕ್ಕಳಿಗೆ ಹಾಸ್ಟೆಲ್ ಮತ್ತು ಲೈಬ್ರರಿಗಳ ಸೌಲಭ್ಯವನ್ನು ನೀಡಿದೆ. ಆದರೆ ಬಡತನ ನಿರ್ಮೂಲನೆಗಾಗಿ ಬಡಜನರ ಜೀವನಮಟ್ಟ ಸುಧಾರಣೆಗಾಗಿ ಸರ್ಕಾರ ಕೈಗೊಳ್ಳುವ ಅನುಕೂಲಕರ ಕ್ರಮಗಳನ್ನು ದುರುಪಯೋಗ ಮಾಡಿಕೊಳ್ಳುವವರೇ ಹೆಚ್ಚು. ಇನ್ನು ಹಲವು ಬಾರಿ ತಮ್ಮ ವಯೋಸಹಜ ಹುಡುಗಾಟದಿಂದ ಸರ್ಕಾರದ ಈ ಯೋಜನೆಗಳನ್ನು ತಿರಸ್ಕರಿಸಿ ಬದುಕಿನ ಅಮೂಲ್ಯ ಅವಕಾಶಗಳನ್ನು ಕಳೆದುಕೊಳ್ಳುವರು. ದೀಪದ ಅಡಿಯಲ್ಲಿ ಕತ್ತಲೆ ಎಂಬ ಮಾತು ನಿಜ ತಾನೇ.

ಈ ಎಲ್ಲ ವ್ಯವಸ್ಥೆಗಳು ಎಷ್ಟೋ ಬಡವರ ಪಾಲಿಗೆ ಸಂಜೀವಿನಿಯಂತಾಗಿವೆ. ಇನ್ನು ಸಮಾಜ ಕಲ್ಯಾಣ ಇಲಾಖೆಗಳು,ಕುಟುಂಬ ಕಲ್ಯಾಣ ಇಲಾಖೆಗಳು ಕುರಿತು ಜನರಿಗೆ ಮಾಹಿತಿಯನ್ನು ಒದಗಿಸಿ ಆರೋಗ್ಯ ಸಂಬಂಧಿ ಶಿಕ್ಷಣವನ್ನು ಸಾರ್ವಜನಿಕರಿಗೆ ಕೊಡ ಮಾಡುತ್ತಲಿದೆ.

ಒಂದು ಆರೋಗ್ಯಕರ ಸಮಾಜ ನಿರ್ಮಾಣವಾಗುವುದು ಆ ಸಮಾಜದ ಜನರು ಸಾಮಾಜಿಕವಾಗಿ ಉತ್ತಮ ಸಂಸ್ಕಾರಗಳನ್ನು ಹೊಂದಿದ್ದು,ಆರ್ಥಿಕವಾಗಿ ಸಬಲರಾಗಿದ್ದು, ಆರೋಗ್ಯಕರ ಹವ್ಯಾಸಗಳನ್ನು ಹೊಂದಿದ್ದು, ರಾಜಕೀಯ ತಿಳುವಳಿಕೆಯನ್ನು ಹೊಂದಿದ್ದು ಆ ದೇಶದ ಹಿರಿಮೆ ಗರಿಮೆಗಳನ್ನು ಎತ್ತಿ ಹಿಡಿಯುವ ಕಾರ್ಯಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿದ್ದರೆ ಅದಕ್ಕಿಂತ ಸಂಪತ್ತು ಬೇರೊಂದಿಲ್ಲ... ಅಂತಹ ಸ್ವಸ್ಥ ಸಮಾಜದ ನಿರ್ಮಾಣದಲ್ಲಿ ನಾವು ನೀವೆಲ್ಲರೂ ಭಾಗಿಯಾಗೋಣ. ಸದೃಢ ಸಮಾಜವನ್ನು ಕಟ್ಟೋಣ ಎಂಬ ಆಶಯದೊಂದಿಗೆ.

• Admissions
• Requirements
• Firm Branding
• Public Notice
• Change of Name

BOOK NOW!

Booking Open for Your Advertisements in Leading Local, State & National News Papers

9482599089 / 9448633038

• Obituary
• Remembrance
• Birthday wish ads
• Events Display &
• Classified ads

SHUBHA Ads C/o HAMPI TIMES, Bamboo Bazaar, Nr Valmiki Circle, Hosapete-583201 Vijayanagara Dist.

ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ e-paper
REACH EVERY WHERE NO BORDER




# ಕುಡಿಯುವ ನೀರು ಸಮಸ್ಯೆ ಇತ್ಯರ್ಥಕ್ಕೆ ಸಹಾಯವಾಣಿ ಆರಂಭ

**ಹಂಪಿ ಟೈಮ್ಸ್ ಕೊಪ್ಪಳ**

ಬರಗಾಲ ಹಾಗೂ ಬೇಸಿಗೆ ಹಿನ್ನೆಲೆ ಜಿಲ್ಲಾಧಿಕಾರಿಗಳ ಆದೇಶದ ಮೇರೆಗೆ ಭಾಗ್ಯನಗರ ಪಟ್ಟಣ ಪಂಚಾಯತ್ ವತಿಯಿಂದ ಕುಡಿಯುವ ನೀರು ಸಮಸ್ಯೆ ಇತ್ಯರ್ಥಕ್ಕೆ ಸಹಾಯವಾಣಿ ಆರಂಭಿಸಲಾಗಿದೆ.

ಪಟ್ಟಣದ ಎಲ್ಲಾ ವಾರ್ಡನ ಜನತೆಗೆ ಕುಡಿಯುವ ನೀರಿನ ಅಭಾವ ಆಗದಂತೆ ನೋಡಿಕೊಳ್ಳಲಾಗುತ್ತಿದ್ದು, ಒಂದು ವೇಳೆ ಸಮಸ್ಯೆ ಬಂದರೆ ತಕ್ಷಣವೇ ಪಟ್ಟಣ ಪಂಚಾಯತಿಯ ಸಹಾಯವಾಣಿ ಸಂಖ್ಯೆ 08539-230243 ಗೆ ಕರೆ ಮಾಡಿ, ದೂರು ಸಲ್ಲಿಸಬಹುದು ಎಂದು ಭಾಗ್ಯನಗರ ಪಟ್ಟಣ ಪಂಚಾಯತ ಮುಖ್ಯಾಧಿಕಾರಿ ಪ್ರಕತಿಳಿಸಿದ್ದಾರೆ.

# ಮಕ್ಕಳಿಗೆ ಉನ್ನತ ಶಿಕ್ಷಣ ಸಂಸ್ಕಾರ ಕೊಟ್ಟು ಬೆಳೆಸಿ

**ಮೊದಲ ಪುಟದಿಂದ**

ನಗರಸಭೆ ಉಪಾಧ್ಯಕ್ಷ ಎನ್.ರೂಪೇಶ್ ಕುಮಾರ್ ಅಧ್ಯಕ್ಷತೆ ವಹಿಸಿ ಮಾತನಾಡಿ, ಮಕ್ಕಳಿಗಾಗಿ ಆಸ್ತಿ ಮಾಡುವುದಕ್ಕಿಂತ ಮಕ್ಕಳನ್ನೇ ಆಸ್ತಿಯನ್ನಾಗಿಸಬೇಕು ಎಂದು ಅಭಿಪ್ರಾಯ ಪಟ್ಟರು.

ಬಾಬ ಸಾಹೆಬ್ ಅಂಬೇಡ್ಕರ್ ಅವರ ಅಭಿಪ್ರಾಯದಂತೆ ಜನರು ಶಿಕ್ಷಣ, ಸಂಘಟನೆಯ ಮೂಲಕ ಹೋರಾಟಕ್ಕೆ ಮುಂದಾಗಬೇಕು. ಅಂದಾಗ ಮಾತ್ರ ಸವಿತಾ ಸಮಾಜಕ್ಕೆ ಎಸ್‌ಸಿ ಮೀಸಲಾತಿ ಕಲ್ಪಿಸುವುದು ಸೇರಿದಂತೆ ಇನ್ನಿತರೆ ಬೇಡಿಕೆಗಳಿಗೆ ಸರ್ಕಾರದ ಗಮನ ಸೆಳೆಯಲು ಸಾಧ್ಯವಾಗುತ್ತದೆ. ಕ್ಷೌರಿಕ ವೃತ್ತಿಯನ್ನು ಉದ್ದೇಶಿಸಿ ಅವಹೇಳನಕಾರಿ ಪದವೊಂದರ ಬಳಕೆಯಿಂದ ಸಮಾಜದ ಜನರ ಮನಸ್ಸಿಗೆ ನೋವಾಗುತ್ತದೆ. ಅಂತಹ ಪದಗಳ ಬಳಕೆಯನ್ನು ನಿಲ್ಲಿಸಬೇಕು ಎಂದು ಮನವಿ ಮಾಡಿದರು.

ಸಹ ಶಿಕ್ಷಕ ಶೇಖರ್ ಸವಿತಾ ಸಮಾಜ ಮತ್ತು ಸವಿತಾ ಮಹರ್ಷಿ ಕುರಿತು ಉಪನ್ಯಾಸ ನೀಡಿದರು. ಇದೆ ವೇಳೆ ಎಸ್‌ಎಸ್‌ಎಲ್‌ಸಿ, ಪಿಯುಸಿ ಹಾಗೂ ಪದವಿ ಪೂರ್ಣಗೊಳಿಸಿದ ಸುಮಾರು 45 ಜನ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು.

ಜಿ.ಪಂ. ಪಿಡಿ ಅಶೋಕ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಉಪನಿರ್ದೇಶಕ ಸಿದ್ದಲಿಂಗೇಶ ರಂಗಣ್ಣನವರ, ಸಮಾಜದ ಪ್ರಮುಖರಾದ ಡಿ.ರಾಮಲಿಂಗಪ್ಪ, ಶ್ರೀನಿವಾಸ, ಸುರೆಶ, ಉಷಾ ವೆಂಕಟೇಶ್, ಡಿ.ಶ್ರೀನಿವಾಸ, ರಾಜಶೇಖರ್, ಬಿ.ವಿ.ಗುರುನಾಥ, ಬಿ. ತಿರುಮಲೇಶ, ಎನ್.ವೇಣುಗೋಪಾಲ, ಶಂಕರ್, ಬಿ.ರಮೇಶ್, ಸಂತೋಷ, ವೆಂಕಟೇಶ, ಉಪಸ್ಥಿತರಿದ್ದರು.

# ಶ್ರೀ ನಿರಂಜನಪ್ರಭು ದೇಶಿಕರ ನಿರಂಜನ ಚರಪಟ್ಟಾಧಿಕಾರ ಮಹೋತ್ಸವ ಮಾ.15ರಂದು



**ಹಂಪಿ ಟೈಮ್ಸ್ ಮರಿಯಮ್ಮನಹಳ್ಳಿ**

ಹಂಪಿ ಹೇಮಕೂಟ ಶೂನ್ಯ ಸಿಂಹಾಸನಾಧೀಶ್ವರ ಜಗದ್ಗುರು ಕೊಟ್ಟೂರು ಬಸವಲಿಂಗ ಮಹಾಸ್ವಾಮಿಗಳು ಶ್ರೀ ಜಗದ್ಗುರು ಕೊಟ್ಟೂರುಸ್ವಾಮಿ ಸಂಸ್ಥಾನಮಠ, ಹೊಸಪೇಟೆ-ಬಳ್ಳಾರಿ-ಹಾಲಕೆರೆ ಪೂಜ್ಯರ ಅಪ್ಪಣೆ ಮೇರೆಗೆ ಪೂಜ್ಯಶ್ರೀ ನಿರಂಜನಪ್ರಭು ದೇಶಿಕರ ನಿರಂಜನ ಚರಪಟ್ಟಾಧಿಕಾರ ಮಹೋತ್ಸವ ಮಾರ್ಚ್ 15ರಂದು ನಡೆಯಲಿದೆ ಎಂದು ಹೆಚ್.ಎಂ. ಚಂದ್ರಶೇಖರಯ್ಯ ಹೇಳಿದರು.

ಅವರು ಸಮೀಪದ ಜಿ.ನಾಗಲಾಪುರದ ಶ್ರೀಗುರು ಒಪ್ಪತ್ತೇಶ್ವರ ಮಠದಲ್ಲಿ, ನಿರಂಜನಪಟ್ಟಾಧಿಕಾರದ ಕುರಿತು ನಡೆಸಿದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ಯಡೆಯೂರು ಶ್ರೀ ಸಿದ್ಧಲಿಂಗೇಶ್ವರ ಪುರಾಣದೊಂದಿಗೆ ಮಾರ್ಚ್ ಒಂದರಿಂದ ಆರಂಭಗೊಂಡು 13ದಿನಗಳ ಕಾಲ ನಡೆದು ಸಂಜೆ ಮಂಗಲೋತ್ಸವವಾಗಲಿದೆ,ಅಂದು ಬೆಳಿಗ್ಗೆ ರಕ್ತದಾನಶಿಬಿರ ನಡೆಯಲಿದೆ.14ರಂದು 3001 ಮುತ್ತೈದೆಯರಿಗೆ ಉಡಿ ತುಂಬುವ ಕಾರ್ಯಕ್ರಮ, ಶ್ರೀಮಠದ ಗುರುಪರಂಪರೆಯ ಪೂಜ್ಯರ ಗದ್ದುಗೆ ಮಂಟಪದ ಲೋಕಾರ್ಪಣೆ ಹಾಗೂ ವಿವಿಧ ವಿಚಾರಗೋಷ್ಠಿಗಳು ನಡೆಯಲಿವೆ. 15ರಂದು ಬ್ರಾಹ್ಮಿಮುಹೂರ್ತದಲ್ಲಿ ಷಟ್‌ಸ್ಥಲ ಬ್ರಹ್ಮೋಪದೇಶ, ಸುವರ್ಣಗಿರಿ ವಿರಕ್ತಮಠ ಒಳಬಳ್ಳಾರಿಯನಿರಂಜನ ಪ್ರಣವಸ್ವರೂಪ ಸಿದ್ಧಲಿಂಗ ಮಹಾಸ್ವಾಮಿಗಳು, ಹಾಗು ಜಗದ್ಗುರು ಕೊಟ್ಟೂರು ಬಸವಲಿಂಗ ಮಹಾಸ್ವಾಮಿಗಳು, ಪೂಜ್ಯ ಶ್ರೀನಿರಂಜನ ಪ್ರಭುದೇಶಿಕರಿಗೆ ನಿರಂಜನದೀಕ್ಷೆಯನ್ನು ಅನುಗ್ರಹಿಸಿ ಪೂಜ್ಯಶ್ರೀಮನ್ ನಿರಂಜನ ಪ್ರಣವಸ್ವರೂಪ ನಿರಂಜನಪ್ರಭು ಮಹಾ ಸ್ವಾಮಿಗಳು ಶ್ರೀ ಗುರು ಒಪ್ಪತ್ತೇಶ್ವರಸ್ವಾಮಿ ವಿರಕ್ತಮಠ ಎಂದು ಪಟ್ಟಾಧಿಕಾರ ನೀಡಲಿದ್ದಾರೆಂದು ತಿಳಿಸಿದರು.

ಸ್ಥಳಿಯ ಮುಖಂಡರಾದ ಗಂಡಿಬಸವರಾಜ, ಅವಳಿತೋಟೇಶ್, ಗಜೇಂದ್ರನಾಯಕ, ಗುರಿಕಾರಸತೀಶ್, ಲಕ್ಷ್ಮಣ, ಮಧುರ ಚೆನ್ನಶಾಸ್ತ್ರೀ, ಸೋಮಣ್ಣ, ಎರಿಸ್ವಾಮಿ, ಹುಲುಮನಿಕೊಟ್ರೇಶ್, ಸೋಮಶೇಖರ್, ರಮೇಶಬ್ಯಾಲಕುಂದಿ, ಮಂಜುನಾಥಗೌಡ, ಶಿಕ್ಷಕ ಶರಣಪ್ಪ ಸೇರಿದಂತೆ ಇತರರಿದ್ದರು. ನಂತರ ನಿಯೋಜಿತ ಪೀಠಾಧಿಪತಿ ನಿರಂಜನ ಪ್ರಭುದೇಶಿಕರು ಪಟ್ಟಾಧಿಕಾರದ ಪೋಸ್ಟರ್ ಬಿಡುಗಡೆಗೊಳಿಸಿದರು.

ಹಿಂದಿನ ಮಠಾಧ್ಯಕ್ಷರಾಗಿದ್ದ ಮರಿಮಹಾಂತ ಮಹಾಸ್ವಾಮಿಗಳವರು ಲಿಂಗೈಕ್ಯರಾದನಂತರ ಶ್ರೀಮಠಕ್ಕೆ ಮಠಾಧ್ಯಕ್ಷರ ಕೊರತೆಯಿತ್ತು,ಭಕ್ತರ ಕೋರಿಕೆಯ ಮೇರೆಗೆ ಜಗದ್ಗುರು ಕೊಟ್ಟೂರುಬಸವಲಿಂಗ ಮಹಾಸ್ವಾಮಿಗಳು, ಒಪ್ಪತ್ತೇಶ್ವರಸ್ವಾಮಿಮಠಕ್ಕೆ,ಕುರುಗೋಡು ಶಾಖಾಮಠದ ಉತ್ತರಾಧಿಕಾರಿಗಳಾದ ಪೂಜ್ಯಶ್ರೀ ನಿರಂಜನಪ್ರಭು ದೇಶಿಕರನ್ನು ಭಕ್ತರ ಭಿನ್ನಹದ ಮೇರೆಗೆ ಶ್ರೀ ಒಪ್ಪತ್ತೇಶ್ವರಮಠಕ್ಕೂ ನಿಯೋಜಿಸಿದ್ದಾರೆ. ಪೂಜ್ಯಶ್ರೀ ನಿರಂಜಪ್ರಭು ದೇಶಿಕರು ಪೂರ್ವಾಶ್ರಮದ ಹೆಸರು ಪರ್ವತಯ್ಯಶಾಸ್ತ್ರಿ ಶೀಲವಂತಮಠ. ಬಾಗಲಕೋಟೆ ಜಿಲ್ಲೆಯ ಹುನಗುಂದ ತಾಲೂಕಿನ ಕಂದಗಲ್ಲು ಗ್ರಾಮದಲ್ಲಿ 24-5-1995ರಲ್ಲಿ, ಗುರ-ಲಿಂಗ-ಜಂಗಮ ಪ್ರೇಮಿಗಳಾದ ಶ್ರೀ ವೇದಮೂರ್ತಿಶಾಸ್ತ್ರಿ ಶೀಲವಂತಮಠ ಮತ್ತು ಗಿರಿಜಾದೇವಿ ಇವರ ಪುಣ್ಯಗರ್ಭದಲ್ಲಿ ಜನಿಸಿದ ಇವರು ಶ್ರೀಗುರು ಒಪ್ಪತ್ತೇಶ್ವರಮಠಕ್ಕೆ 14ನೇ ಪೀಠಾಧಿಪತಿಗಳಾಗಲಿದ್ದಾರೆ.

# ವಿಎಸ್‌ಕೆ ವಿವಿಯಿಂದ ಅಂತಾರಾಷ್ಟ್ರೀಯ ಸಮ್ಮೇಳನ

**ಹಂಪಿ ಟೈಮ್ಸ್ ಬಳ್ಳಾರಿ**

ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯದ ಸಮಾಜ ವಿಜ್ಞಾನ ನಿಕಾಯದ ವತಿಯಿಂದ 'ಸಮಾಜ ವಿಜ್ಞಾನದಲ್ಲಿ ಬಹುಶಿಸ್ತೀಯ ಪ್ರಚಲಿತ ಸಂಶೋಧನೆಗಳು' ಕುರಿತು ಎರಡು ದಿನಗಳ ಅಂತಾರಾಷ್ಟ್ರೀಯ ಸಮ್ಮೇಳನವನ್ನು ಫೆ.28 ಮತ್ತು 29 ರಂದು ವಿವಿಯ ಡಾ.ಬಿ.ಆರ್.ಅಂಬೇಡ್ಕರ್ ಸಭಾಂಗಣದಲ್ಲಿ ಏರ್ಪಡಿಸಲಾಗಿದೆ.

ಫೆ.28 ರಂದು ಬೆಳಿಗ್ಗೆ 11 ಗಂಟೆಗೆ ಕಲಬುರಗಿಯ ಕೇಂದ್ರೀಯ ವಿಶ್ವವಿದ್ಯಾಲಯದ ಕುಲಪತಿಗಳಾದ ಪ್ರೊ.ಬಟ್ಟು ಸತ್ಯನಾರಾಯಣ ಕಾರ್ಯಕ್ರಮ ಉದ್ಘಾಟಿಸುವರು. ಕೊಡಗು ವಿಶ್ವವಿದ್ಯಾಲಯದ ಕುಲಪತಿಗಳಾದ ಪ್ರೊ.ಅಶೋಕ್ ಆಲೂರ್ ಸಮ್ಮೇಳನದ ಮುಖ್ಯ ಭಾಷಣ ಮಾಡುವರು. ವಿಜಯನಗರ ಶ್ರೀಕೃಷ್ಣದೇವರಾಯ ವಿವಿ ಕುಲಪತಿ ಪ್ರೊ. ಡಾ.ಅನಂತ್ ಝುಂಡೇಕರ್ ಅಧ್ಯಕ್ಷತೆ ವಹಿಸುವರು. ಕುಲಸಚಿವ ರುದ್ರೇಶ್. ಎಸ್.ಎನ್, ಕುಲಸಚಿವರು (ಮೌಲ್ಯಮಾಪನ) ಪ್ರೊ. ರಮೇಶ್ ಓಲೇಕಾರ್, ವಿತ್ತಾಧಿಕಾರಿ ಪ್ರೊ. ಸದ್ಯೋಜಾತಪ್ಪ ಸೇರಿದಂತೆ ವಿವಿಧ ವಿಭಾಗದ ಮುಖ್ಯಸ್ಥರು, ಡೀನರು ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿರುವರು.

ವಿದೇಶ ಹಾಗೂ ದೇಶದ ಹಲವು ರಾಜ್ಯಗಳ ನೂರಕ್ಕೂ ಹೆಚ್ಚು ಪ್ರತಿನಿಧಿಗಳು ಸಮ್ಮೇಳನದಲ್ಲಿ ಭಾಗವಹಿಸಿ ತಮ್ಮ ಸಂಶೋಧನಾ ಪಾಂಡಿತ್ಯದ ಕುರಿತು ಪ್ರಬಂಧ ಮಂಡಿಸುವರು.

# ಬೇಡಿಕೆಗಿಂತ ಕರ್ತವ್ಯಕ್ಕೆ ಆದ್ಯತೆ ಇರಲಿ

ಮೊದಲ ಪುಡದಿಂದ

**ಪ್ರಜಾಪ್ರಭುತ್ವದ ಮಾಲೀಕರ ಪರವಾಗಿ ಕೆಲಸ ಮಾಡಬೇಕು:** ರಾಜ್ಯದ ಜನ ನನಗೆ ಎರಡನೇ ಬಾರಿಗೆ ಮುಖ್ಯಮಂತ್ರಿಯಾಗುವ ಅವಕಾಶವನ್ನು ಕಲ್ಪಿಸಿಕೊಟ್ಟಿದ್ದಾರೆ. ಅದರಲ್ಲಿ ನೀವೂ, ನಿಮ್ಮ ಕುಟುಂಬದವರೂ ಇದ್ದಾರೆ. 7 ಕೋಟಿ ಕನ್ನಡಿಗರ ಭಾಗವಾದ ಸರ್ಕಾರಿ ನೌಕರರು, ಸಾಮಾಜಿಕ ವ್ಯವಸ್ಥೆಯನ್ನು ಅರ್ಥ ಮಾಡಿಕೊಂಡಿದ್ದೀರಿ ಎಂದು ಭಾವಿಸಿದ್ದೇನೆ. ನಮ್ಮ ಸಮಾಜದಲ್ಲಿ ಸಾಮಾಜಿಕ, ಆರ್ಥಿಕ ಸಮಾನತೆ ತರಬೇಕು.

ನಾವೆಲ್ಲರೂ ಪ್ರಜಾಪ್ರಭುತ್ವದ ಮಾಲೀಕರ ಪರವಾಗಿ ಕೆಲಸ ಮಾಡಲು ಇರಬೇಕು ಎಂದರು.

ರಾಜ್ಯದ ಜನರ ಪರವಾಗಿ ಕೆಲಸ ಮಾಡಬೇಕಾಗಿರುವುದು ಮೊದಲನೇ ಆದ್ಯತೆ ಸರ್ಕಾರ ನಿಮಗೆ ನ್ಯಾಯ ಒದಗಿಸುವ ಕೆಲಸ ಮಾಡಬೇಕು ಎನ್ನುವುದರಲ್ಲಿ ಎರಡು ಮಾತಿಲ್ಲ. ಸರ್ಕಾರ ನಿಮ್ಮ ನ್ಯಾಯಯುತ ಬೇಡಿಕೆಗಳನ್ನು ಈಡೇರಿಸಬೇಕು. ಆದರೆ ಅದೇ ಮೊದಲ ಆದ್ಯತೆ ಅಲ್ಲ. ಅನ್ಯಾಯಗಳನ್ನು ಸರಿಪಡಿಸುವುದು ಸರ್ಕಾರದ ಕರ್ತವ್ಯ. ರಾಜ್ಯದ ಜನರ ಪರವಾಗಿ ಕೆಲಸ ಮಾಡಬೇಕಾಗಿರುವುದು ಮೊದಲನೇ ಆದ್ಯತೆ. ಬೇಡಿಕೆಗಳು ನಂತರದ ಆದ್ಯತೆ. ಇದನ್ನು ಸ್ಪಷ್ಟವಾಗಿ ನೀವು ಅರ್ಥಮಾಡಿಕೊಂಡಿದ್ದೀರಿ ಎನ್ನುವುದು ನನ್ನ ಅನಿಸಿಕೆ ಎಂದರು.

**ನಾನು ಸರ್ಕಾರಿ ನೌಕರರ ಪರ :** ಸರ್ಕಾರಿ ನೌಕರರ ಸಮಸ್ಯೆಗಳನ್ನು ಅರಿತು 7ನೇ ವೇತನ ಆಯೋಗ ರಚಿಸಲಾಗಿದ್ದು, 6ನೇ ವೇತನ ಆಯೋಗವನ್ನು ನಮ್ಮ ಸರ್ಕಾರ ಜಾರಿಗೆ ತಂದಿತ್ತು. ಆ ಸಂದರ್ಭದಲ್ಲಿ ಸರ್ಕಾರಿ ನೌಕರರ ವಿರುದ್ಧವಿರುವುದಾಗಿ ನನ್ನ ಮೇಲೆ ಆರೋಪ ಮಾಡಿದ್ದರು. ಆದರೆ ನಾನೇ 6ನೇ ವೇತನ ಆಯೋಗವನ್ನು ರಚಿಸಿದ್ದೆವು.

ಸರ್ಕಾರಿ ನೌಕರರ ನ್ಯಾಯಯುತ ಬೇಡಿಕೆಗಳನ್ನು ಈಡೇರಿಸುವ ಕೆಲಸವಾಗಬೇಕು. 6ನೇ ವೇತನ ಆಯೋಗದಲ್ಲಿ ಶೇ. 30ರಷ್ಟು ಫಿಟ್ಮೆಂಟ್ ಸೌಲಭ್ಯ ನೀಡಲು 10,500 ಕೋಟಿ ರೂ.ಗಳನ್ನು ಹೆಚ್ಚುವರಿಯಾಗಿ ಬಿಡುಗಡೆ ಮಾಡಿದೆ. ಈಗ 7 ನೇ ವೇತನ ಆಯೋಗದ ಮಧ್ಯಂತರ ವರದಿಯಂತೆ 17% ಹೆಚ್ಚಳ ಮಾಡಲಾಗಿತ್ತು. ಆಯೋಗದ ಅಂತಿಮ ವರದಿ ನೀಡಲು ಇನ್ನಷ್ಟು ಕಾಲಾವಕಾಶ ಬೇಕೆಂದು ಆಯೋಗದ ಅಧ್ಯಕ್ಷರು ಕೋರಿದ್ದು, ಮಾರ್ಚ್ 15 ರವರೆಗೆ ವರದಿ ನೀಡಲು ಸಮಯಾವಕಾಶ ನೀಡಲಾಗಿದೆ. ಲೋಕಸಭಾ ಚುನಾವಣೆಯ ಹಿನ್ನಲೆ , ಆಯೋಗದ ಅಂತಿಮ ವರದಿಯನ್ನು ಆದಷ್ಟು ಜಾಗ್ರತೆ ಸಲ್ಲಿಸುವುದಾಗಿ ತಿಳಿಸಿದ್ದಾರೆ. ನಾನು ಸರ್ಕಾರಿ ನೌಕರರ ಪರವಾಗಿದ್ದೇನೆ ಎಂದು ತಿಳಿಸಿದರು.

ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಸಿ.ಎಸ್. ಷಡಕ್ಷರಿ, ಸಚಿವರಾದ ಈಶ್ವರ್ ಖಂಡ್ರೆ, ಮುಖ್ಯಮಂತ್ರಿಗಳ ರಾಜಕೀಯ ಕಾರ್ಯದರ್ಶಿ ನಸೀರ್ ಅಹಮದ್, ಸರ್ಕಾರಿ ನೌಕರರ ಸಂಘದ ಮಾಜಿ ಅಧ್ಯಕ್ಷ ಕೃಷ್ಣಪ್ಪ, ಶೇಷಯ್ಯ, ಭೈರಪ್ಪ, ಸರ್ಕಾರಿ ನೌಕರರ ಸಂಘದ ಕಾರ್ಯದರ್ಶಿ ಶೀನಿವಾಸ ತಿಮ್ಮೇಗೌಡ, ಖಜಾಂಚಿ ಡಾ: ಸಿದ್ದರಾಮಣ್ಣ, ರಾಜ್ಯ ಮಟ್ಟದ ನೌಕರರ ಸಂಘದ ಪದಾಧಿಕಾರಿಗಳು ಉಪಸ್ಥಿತರಿದ್ದರು.

# 50 ವರ್ಷಗಳ ಹಳೇ ಗೆಳೆಯರ ಸ್ನೇಹ ಸಮ್ಮಿಲನ

## ನೆನಹುಗಳ ಬುತ್ತಿ ಬಿಚ್ಚಿದ ಸ್ನೇಹಿತರು



**ಹಂಪಿ ಟೈಮ್ಸ್ ಕೂಡ್ಲಿಗಿ**

1974 ನೇ ಎಸ್‌ಎಸ್‌ಎಲ್ ಸಿ ಹಳೇ ವಿದ್ಯಾರ್ಥಿಗಳ ಸ್ನೇಹ ಸಮ್ಮಿಲನ ಕಾರ್ಯಕ್ರಮ ಪಟ್ಟಣದ ಸರ್ಕಾರಿ ಜೂನಿಯರ್ ಕಾಲೇಜಿನಲ್ಲಿ ಇತ್ತಿಚೆಗೆ ಜರುಗಿತು. ಈ ಸಂಧರ್ಭದಲ್ಲಿ ನಿವೃತ್ತ ಶಿಕ್ಷಕ ಡಿ.ನಾಗರಾಜ ಮಾತನಾಡಿ, ಈ ಹಿಂದೆ ಗುರು, ಶಿಷ್ಯರ ಬಾಂಧವ್ಯ ಅತ್ಯಂತ ಪವಿತ್ರವಾಗಿತ್ತು. ಗುರು ಸ್ಥಾನದಲ್ಲಿದ್ದ ಶಿಕ್ಷಕರ ಪಾಠದ ಜತೆ ಪಠ್ಯದ ವಿಷಯದಲ್ಲೂ ಅಷ್ಟೇ ಕಠಿಣ ತರಬೇತಿ ನೀಡುತ್ತಿದ್ದರು. ಹಿಂದೆ ದೈಹಿಕ ಶಿಕ್ಷಕರಾಗಿದ್ದ ಗಾಂಧಿವಾದಿ ಬಿಂದು ಮಾಧವ ಗರಡಿಯಲ್ಲಿ ಅನೇಕ ವಿಧ್ಯಾರ್ಥಿಗಳು ರಾಜ್ಯಮಟ್ಟದಲ್ಲಿ ಕಬ್ಬಡಿ, ಖೋ ಖೋ ಸೇರಿದಂತೆ ಎಲ್ಲಾ ವಿಭಾಗದಲ್ಲಿಯೂ ಕೂಡ್ಲಿಗಿ ಪ್ರೌಢಶಾಲಾ ವಿಧ್ಯಾರ್ಥಿಗಳು ಮೇಲುಗೈ ಸಾಧಿಸಿ ಇತಿಹಾಸ ಸೃಷ್ಟಿಸಿದ್ದರು. ಅಲ್ಲದೇ ಓದಿನಲ್ಲೂ ಸಹ ಅತ್ಯಂತ ಪ್ರೌಢಿಮೆ ಮೆರೆದು ಈಗ ಡಾಕ್ಟರ್, ಇಂಜಿನಿಯರ್, ಪಿಎಸ್ಐ ಹಾಗೂ ಸೈನಿಕರಾಗಿ ಯಶಸ್ಸು ಕಂಡಿದ್ದಾರೆ. ಸರ್ಕಾರಿ ಜೂನಿಯರ್ ಕಾಲೇಜು ಅಂತಹ ಸಾವಿರಾರು ವಿಧ್ಯಾರ್ಥಿಗಳಿಗೆ ಶಿಸ್ತು ಬದ್ದ ಶಿಕ್ಷಣ ನೀಡಿ ಸಮಾಜದಲ್ಲಿ ಉತ್ತಮ ಪ್ರಜೆಗಳನ್ನಾಗಿ ರೂಪಿಸಿದೆ ಎಂದರು.

ಗ್ರಾಮೀಣ ಭಾಗದಿಂದ ಅಸಂಖ್ಯಾತ ವಿದ್ಯಾರ್ಥಿಗಳು ಇಲ್ಲಿ ಅಭ್ಯಾಸ ಮಾಡಿ ಶಿಕ್ಷಣದ ಜತೆ ಸಂಸ್ಕಾರವಂತರನ್ನಾಗಿ ಮಾಡಿದ ಕೀರ್ತಿ ಇಲ್ಲಿನ ಗುರುಗಳಿಗೆ ಸಲ್ಲುತ್ತದೆ ಎಂದ ಅವರು ಸುಮಾರು 50 ವರ್ಷಗಳ ಹಿಂದಿನ ಹತ್ತನೆ ತರಗತಿ ಬ್ಯಾಚ್ ನ ಸಹಪಾಠಿಗಳು ಪರಸ್ಪರವಾಗಿ ಹಸ್ತಲಾಘವ ನೀಡಿ ತಮ್ಮ ಹಳೆಯ ನೆನಪುಗಳನ್ನ ಹಾಗೂ ನೆಚ್ಚಿನ ಶಿಕ್ಷಕರಾದ ಅಂಗಡಿ ಸಿದ್ದಣ್ಣ, ಎಸ್.ಎಂ. ಚಂದ್ರಶೇಖರಯ್ಯ, ಮರುಳಸಿದ್ದನ ಗೌಡ, ಹನುಮಂತ ರೆಡ್ಡಿ ಸೇರಿದಂತೆ ಅನೇಕ ಮಾದರಿ ಶಿಕ್ಷಕರ ಬಗ್ಗೆ ಕೊಂಡಾಡಿದರು.

ಡಾ.ಜಯಾನಂದ, ಡಾ.ಅರವಿಂದ ಪಾಟೀಲ, ನಿವೃತ್ತ ಪಿಎಸ್ಐ ದೊಡ್ಡಪ್ಪ, ಯು. ನಾಗಪ್ಪ, ಟಿ.ಎಂ.ಬಸಯ್ಯ, ಜಿ.ಎಸ್.ದೊಡ್ಡಪ್ಪ, ಜಿ.ಕೆ.ಗೋಪಾಲ ಕೃಷ್ಣ, ಜಯಾನಂದ ಸ್ವಾಮಿ, ಗೌರಿ ಶಂಕರ, ವಾದಿರಾಜ, ಬಾಂಬೆ ಕೃಷ್ಣ ಮೂರ್ತಿ, ಮಂಜುನಾಥ, ಎಂ.ಅಬ್ದುಲ್ ಜಬ್ಬಾರ್, ಮಹಮ್ಮದ್ ರಫಿ, ನಿವೃತ್ತ ಸಿಪಿಐ ಷಫೀವುಲ್ಲ, ಹೊನ್ನುರಪ್ಪ, ಎಂ.ಎಚ್.ಮಹಾಲಿಂಗೇಶ್ ಇದ್ದರು.

# ತೋಟಗಾರಿಕೆ ತರಬೇತಿ: ಅರ್ಜಿ ಆಹ್ವಾನ

**ಹಂಪಿ ಟೈಮ್ಸ್ ಬಳ್ಳಾರಿ**

ತೋಟಗಾರಿಕೆ ಇಲಾಖೆಯಿಂದ 2024-25ನೇ ಸಾಲಿಗೆ 10 ತಿಂಗಳ ತೋಟಗಾರಿಕೆ ತರಬೇತಿಗಾಗಿ ಜಿಲ್ಲೆಯ ರೈತ ಮಕ್ಕಳ ಪುರುಷ ಮತ್ತು ಮಹಿಳಾ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ ಎಂದು ತೋಟಗಾರಿಕೆ ಇಲಾಖೆಯ ಉಪನಿರ್ದೇಶಕ ಸಂತೋಷ್ ಸಪ್ಪಂಡಿ ಅವರು ತಿಳಿಸಿದ್ದಾರೆ.

ವಿಜಯನಗರ ಜಿಲ್ಲೆಯ ಹಗರಿಬೊಮ್ಮನಹಳ್ಳಿ ತಾಲ್ಲೂಕಿನ ಮಾಲವಿ ತೋಟಗಾರಿಕೆ ತರಬೇತಿ ಕೇಂದ್ರದಲ್ಲಿ 2024ರ ಮೇ 02 ರಿಂದ 2025 ರ ಫೆ.28 ರ ವರೆಗೆ ಒಟ್ಟು 10 ತಿಂಗಳ ತರಬೇತಿಯನ್ನು ನೀಡಲಾಗುತ್ತದೆ.

**ಅಭ್ಯರ್ಥಿಗಳ ಆಯ್ಕೆ ಗುರಿ:**

ಮಹಿಳೆಯರು 8, ಪುರುಷರು 16, ಪರಿಶಿಷ್ಟ ಜಾತಿ 03, ಪರಿಶಿಷ್ಟ ಪಂಗಡ 01 ಮತ್ತು ಇತರೆ 20 ಅಭ್ಯರ್ಥಿಗಳು ಸೇರಿ ಒಟ್ಟು 24 ಅಭ್ಯರ್ಥಿಗಳನ್ನು ಜಿಲ್ಲೆಯ ತೋಟಗಾರಿಕೆ ಉಪ ನಿರ್ದೇಶಕರು (ಜಿಪಂ) ಆಯ್ಕೆ ಮಾಡುತ್ತಾರೆ.

ಅಭ್ಯರ್ಥಿಗಳ ವಯೋಮಿತಿಯು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ 18 ವರ್ಷದಿಂದ 33 ವರ್ಷದೊಳಗೆ ಇರಬೇಕು. ಇತರರಿಗೆ 18 ವರ್ಷದಿಂದ 30 ವರ್ಷದೊಳಗೆ ಹಾಗೂ ಮಾಜಿ ಸೈನಿಕರಿಗೆ 33 ರಿಂದ 65 ವರ್ಷದೊಳಗಿರಬೇಕು.

ಅಭ್ಯರ್ಥಿಗಳು ಕನಿಷ್ಠ ಕನ್ನಡ ವಿಷಯಗಳೊಂದಿಗೆ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು. ತರಬೇತಿ ಹೊಂದಲು ಬಯಸುವ ಅಭ್ಯರ್ಥಿಯ ತಂದೆ-ತಾಯಿ, ಪೋಷಕರು ಕಡ್ಡಾಯವಾಗಿ ಜಮೀನು ಹೊಂದಿರಬೇಕು ಹಾಗೂ ಸ್ವಂತ ಸಾಗುವಳಿ ಮಾಡುತ್ತಿರಬೇಕು.

ಅರ್ಜಿಗಳನ್ನು ಮಾ.01 ರಿಂದ 30 ರ ವರೆಗೆ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು ಬಳ್ಳಾರಿ, ಇವರ ಕಚೇರಿಯಲ್ಲಿ ಪಡೆಯಬಹುದು ಅಥವಾ ಇಲಾಖಾ ವೆಬ್ ಸೈಟ್ https://horticulturedir.karnataka.gov.in ನಲ್ಲಿ ಡೌನ್‌ಲೋಡ್ ಮಾಡಿಕೊಳ್ಳಬಹುದು.

ಭರ್ತಿಮಾಡಿದ ಅರ್ಜಿಗಳನ್ನು ಏಪ್ರೀಲ್ 01 ರೊಳಗಾಗಿ ಇದೇ ಕಚೇರಿಗೆ ಸಲ್ಲಿಸಬೇಕು. ಏಪ್ರೀಲ್ 06 ರಂದು ಬೆಳಿಗ್ಗೆ 11 ಗಂಟೆಗೆ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರ ಕಚೇರಿಯಲ್ಲಿ ಸಂದರ್ಶನ ನಡೆಯಲಿದೆ.

ಹೆಚ್ಚಿನ ಮಾಹಿತಿಗಾಗಿ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರ ಕಚೇರಿ ಅಥವಾ ದೂ.08392-278588 ಗೆ ಸಂಪರ್ಕಿಸಬಹುದು ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಸಣ್ಣ, ಮಧ್ಯಮ ಉದ್ಯಮಗಳ ಪಾವತಿಗೆ ಪರಿಹಾರ




**ಹಂಪಿ ಟೈಮ್ಸ್ ಬಳ್ಳಾರಿ**

ಬಳ್ಳಾರಿ ಜಿಲ್ಲಾ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆ, ಬಳ್ಳಾರಿ ಹಾಗೂ ಬಳ್ಳಾರಿ ಬ್ರಾಂಚ್ ಆಫ್ ಎಸ್‌ಐಆರ್‌ಸಿ ಆಫ್ ಐಸಿಎಐ ಇವರ ಸಂಯುಕ್ತಾಶ್ರಯದಲ್ಲಿ ಸಣ್ಣ, ಅತಿಸಣ್ಣ ಮತ್ತು ಮಧ್ಯಮ ಗಾತ್ರದ (ಎಂಎಸ್‌ಎಂಇ) ಸಮಸ್ಯೆಗಳ ಪರಿಹಾರದ ಜಾಗೃತಿ ಶಿಬಿರ ಮಂಗಳವಾರ ನಡೆಯಿತು

ಬಳ್ಳಾರಿ ಜಿಲ್ಲಾ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಯ ಅಧ್ಯಕ್ಷರಾದ ಬಿ.ಮಹಾರುದ್ರಗೌಡ ಅವರು ಮುಖ್ಯ ಅತಿಥಿಗಳನ್ನು ಸ್ವಾಗತಿಸಿ, ಉದ್ಯಮಿಗಳು ಪಾವತಿ ಮಾಡುವಲ್ಲಿ ಎದುರಾಗುವ ಸಮಸ್ಯೆಗಳು, 43ಬಿ.ಹೆಚ್ ಹಾಗೂ ಆದಾಯ ತೆರಿಗೆ ಮಾಸಿಕ ಲೆಕ್ಕಪತ್ರಗಳ ಇತ್ಯರ್ಥ, ಚುನಾವಣಾ ಸಂದರ್ಭದಲ್ಲಿ ನಗದು ಹಣ ನಿರ್ವಹಣೆ-ಸಾಗಾಣಿಕೆ ಸೇರಿ ಇನ್ನಿತರೆ ವಿಷಯಗಳ ಕುರಿತು ತಜ್ಞರು ಮಾಹಿತಿ ನೀಡುತ್ತಾರೆ ಎಂದರು.

ಯಶವಂತರಾಜ್ ನಾಗಿರೆಡ್ಡಿ, ಹಿರಿಯ ಉಪಾಧ್ಯಕ್ಷರು, ಮಾತನಾಡಿ, ಸಿಡ್ಬಿ, ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ, ಜಿಲ್ಲಾ ಕೈಗಾರಿಕಾ ಕೇಂದ್ರ ಹಾಗೂ ಕಾಸಿಯಾದ ಸಂಯುಕ್ತ ಆಶ್ರಯದಲ್ಲಿ ದಿನಾಂಕ ಮಾರ್ಚ 1 ಸೋಮವಾರ ರಾಯಲ್ ಫೋರ್ಟ್ ಸಭಾಂಗಣದಲ್ಲಿ ಸೂಕ್ಷ್ಮ ಮತ್ತು ಸಣ್ಣ ಕೈಗಾರಿಕೆಗಳಿಗೆ ಸವಲತ್ತುಗಳು ಹಾಗೂ ಹಣಕಾಸಿನ ನೆರವು - ರಫ್ತು ಕುರಿತು ಅರಿವು ಮೂಡಿಸುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಎಂದರು.

ಸಿಎ ರಾಜೇಶ ಬಾಗ್ರೇಚ್ ಇವರು 43ಬಿಹೆಚ್ ಬಗ್ಗೆ ಉಪನ್ಯಾಸ ನೀಡಿದರು, ಎಂ.ಎಸ್.ಎಂ.ಸಿ ಪಾವತಿ ಮಾಡುವುದು ವಿಳಂಬವಾದರೆ ಯಾವ ಪದ್ಧತಿಗಳನ್ನು ಅನುಸರಿಸಬೇಕು ಎಂದು ಉಪನ್ಯಸ ನೀಡಿದರು. ಸಿ. ಶ್ರೀಧರ ಪಾರ್ಥಸಾರದಿ ಇವರು ಖಾತೆಗಳ ಪುಸ್ತಕಗಳನ್ನು ಮಾರ್ಚ ತಿಂಗಳ ಅಂತ್ಯಕ್ಕೆ ಯಾವ ರೀತಿ ಖಾತೆಗಳನ್ನು ಮುಚ್ಚವುದರಲ್ಲಿ ಅನುಸರಿಸಬೇಕಾದ ಪದ್ಧತಿಗಳನ್ನು ಮನಮುಟ್ಟುವಂತೆ ಉಪನ್ಯಾಸವನ್ನು ನೀಡಿದರು.

ಸಿಎ ಕೆ ರಾಜಶೇಖರ ಇವರು ಚುನಾವಣಾ ನೀತಿ ಸಂಹಿತೆ ಜಾರಿ ಇರುವ ಅವಧಿಯಲ್ಲಿ ತೆಗದುಕೊಳ್ಳುವ ಮುನ್ನೆಚ್ಚರಿಕೆಗಳು ಹಾಗೂ ಯಾವ ಪದ್ಧತಿಯನ್ನು ಅನುಸರಿಸಬೇಕು ಹಾಗೂ ಯಾವ ಪದ್ಧತಿಯನ್ನು ಅನುಸರಿಸಬಾರದು ಎನ್ನವ ವಿಷಯಗಳ ಬಗ್ಗೆ ಉಪನ್ಯಾಸ ನೀಡಿದರು. ಕೆ.ಸಿ.ಸುರೇಶಬಾಬು, ಗೌರವ ಕಾರ್ಯದರ್ಶಿಗಳು ವಂದನಾರ್ಪಣೆ ಮಾಡಿದರು.

ಈ ಕಾರ್ಯಕ್ರಮದಲ್ಲಿ ಸಂಸ್ಥೆಯ ಉಪಾಧ್ಯಕ್ಷ ರಗಳಾದ ಎಸ್. ದೊಡ್ಡನಗೌಡ, ಸೊಂತಗಿರಿಧರ, ಜಂಟಿಕಾರ್ಯದರ್ಶಿಗಳಾದ, ಡಾ ಮರ್ಚೇಡ್ ಮಲ್ಲಿಕಾರ್ಜುನಗೌಡ, ವಿ.ರಾಮಚಂದ್ರ, ನಮ್ಮ ಸಂಸ್ಥೆಯ ಎಲ್ಲಾ ಪದಾಧಿಕಾರಿಗಳು, ಕಾರ್ಯಕಾರಿ ಸಮಿತಿ ಸದಸ್ಯರು, ಉಪ ಕಮಟಿಗಳ ಚೇರ್ಮನ್‌ಗಳು, ವಿಶೇಷ ಆಹ್ವಾನಿತರು, ವಿಶೇಷ ಸಮನ್ವಯ ಸಮಿತಿ ಸದಸ್ಯರು, ರೈಸ್‌ಮಿಲ್ ಅಸೋಸಿಯೇಷನ್, ಕಾಟನ್ ಅಸೋಸಿಯೇಷನ್, ಎಪಿಎಂಸಿ ವರ್ತಕರು, ಇಂಡಸ್ಟ್ರಿಯಲ್ ಅಸೋಸಿ ಯೇಷನ್, ಸ್ಪಾಂಜ್ ಐರನ್ ಅಸೋಸಿ ಯೇಷನ್, ಗಾರ್ಮೆಂಟ್ಸ್ ಅಸೋಸಿಯೇಷನ್, ಕೋಲ್ಡ್ ಸ್ಟೋರೇಜ್ ಅಸೋಸಿಯೇಷನ್‌ನ ಹಾಗೂ ಇತರೆ ಸಂಘ-ಸಂಸ್ಥೆಗಳ ಅಧ್ಯಕ್ಷರು/ಕಾರ್ಯದರ್ಶಿಗಳು ಮತ್ತು ಪದಾಧಿಕಾರಿಗಳು ಈ ಕಾರ್ಯಕ್ರದಲ್ಲಿ ಭಾಗವಹಿಸಿದ್ದರು.




**IN THE COURT OF THE CIVIL JUDGE & J.M.F.C. AT KUDLIGI,Crl. Misc. No.788/2023**

Between:
E.Papamma ...Petitioner
And
The Tahasildar Kudligi ...Respondent

**SUMMONS TO INTEREST PARSON U/O V RULE 20(A) R/W SEC 151 OF CPC FILED ON BEHALF OF THE PETITIONER.3**

Whereas the above petitioners have instituted above petition to get the death certificate of their deceased petitioners Aunty by name Chowdamma, wife of Late Hanumanthappa, was died on 15/04/1999 at Nagalapura village, Kudligi Taluk, Vijayanagara District, on the file of the civil Judge& JMFC at Kudligi, The Tahasildar Kudligi is the respondent. The interested per Greats are hereby summoned to appear in this court in per or by pleader duly instructed and able to answer all material question relating to the above petition on 28/02/2024 at 11 A.M. and interested per sare directed to produce all the documents upon which you intended to rely in support of your defense.

Take notice that in default of your appearance on that day, above mentioned case will be heard and determined exparte.

Given under my hand and seal of this Hon'ble Court on 09/10/2023

By Order of the court
Chief Ministerial Officer
Civil Judge J.D) Court Kudligi

Govind Reddy
Advocate, Kudligi

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA